In this context, let me just impeach the statements made by some of my friends. In fact, some of the friends have been very courteous and have used a very graceful language, a language of restraint. One gentleman who is not here now started using very vituperative language. But I am very grateful to the senior hon'ble Member Mr. Siddaveeappa on this side who asked, are we at war with the Maharashtrians? After all, they are our friends and we had very cordial relationship with them during the course of history. The relationship between the Marathi people and the Kannada people has been not of friendship but it has been one of brotherliness also. Both have held each other in great esteem and affection as could be seen from history. Shivaji's father Shahaji was a Commander-in-Chief of the Decean. He lived in Bangalore and ruled certain areas. Not only that. His son Shivaji also toured here and he drew inspiration from the Vijayanagar Empire. The Sangam Kings met him and sought his advice. They also requested him to come to the South. He responded and they gave him an enthusiastic reception. These Sangam Kings are the forefathers of the hon'ble member Raja Thirumalaraya, who gave him reception. In token of his affection for them, Shivaji gave them a silver plate on which there are inscriptions in Modi and Marathi. Even to this day, that silver plate is preserved by them with great sense of honour by their descendent the elder brother of Raja Thirumala Raya. In this context, we would do well to remember the cordial relationship that existed between Shivaji's son Rajaram and Channamma Rani of Bednur; she gave him protection against Aurangzeb's forces and custody back to Maharashtra. The relationship between the Kannadigas and the Marathi people were so cordial that several instances in that regard are remembered even to this day throughout Maharashtra by the Marathi people with a deep sense of gratitude.

Unfortunately, during the recent years there has been a rupture. For this, our Congress leaders are responsible, they wanted homogeneous linguistic States. The common man never bothered about it because the Maharastrians and the Karnataka people lived together well without any hitch. The Congress leaders wanted linguistic States and when they wanted to have linguistic States, they did not want to press it to its logical conclusion. So, they left these border disputes unsolved. We have no ill-will against the Kannadiga people. Prior to the 1962 General Elections, the Four-Man Committee was appointed. Prior to the 1967 Elections, this Mahajan Commission was appointed. As long as these disputes are there, the common man suffers. These troubles have affected national integration also.

It has been made out that Mr. Mahajan was impartial. Now, I have to impeach his integrity. I have gone through his autobiography. Mr. Mahajan is a person who himself has admitted that he had no belief in the linguistic States. He has stated this in his biography. It could also be seen from it that here and there he is against Maharashtrians. I do not want to read those portions now. I do not also wish to deal

(SRI B. P. KADAM)

with his other dealings as a lawyer and disparage him. They become very clear if one goes through his biography. In fact, I feel it would be better I read those extracts to convince the House what views he entertained. I will read them.

Sri S. R. KANTHI.—May I say a word ?

Mr. DEPUTY SPEAKER.—Order, order.

Sri B. P. KADAM.—I request the hon'ble Minister to give me a patient hearing.

Sri S. R. KANTHI.—May I say a word ? My hon'ble friend Mr. Kadam is saying that there are unfavourable remarks against Maharashtrians. That is not so. There are unkind remarks not only to Maharashtra but to Mysore also. He has not been unjust because he has made unfavourable remarks against Maharashtra. That cannot be. The judge sits there ; when the case is argued and unkind or adverse remarks are made by the judge, it should not be presumed that he is giving any colour.

Sri B. P. KADAM.—The hon'ble Minister for Parliamentary Affairs is relying upon the Report. I did not make reference to Mahajan's Report. I referred to his autobiography.

Sri S. R. KANTHI.—It is not correct to say that Mr. Mahajan has bad opinion about Maharashtrians.

Sri B. P. KADAM.—I will give the page number of his autobiography.

Sri S. R. KANTHI.—That autobiography has been written long, long back. Not that the Government of India did not know it. In spite of that, he has been appointed. He has been welcomed in Maharashtra more than in Mysore.

Sri B. P. KADAM.—The time taken by the hon'ble Minister may be deducted.

4-30 P.M.

Sir, in the terms of reference, the Working Committee played a mischief in not giving a clear mandate. That is why all this chaos has resulted. They simply said that this will be considered and that will be considered. In a linguistic State language should be the supreme consideration. The fundamental basis for reorganisation of States was the wishes of the people. Wishes of the people means the wishes of the people of the area concerned.

Justice Mahajan has in a very cavalier and bureaucratic manner referred to Konkani and has said that Konkani is a separate language. In the Census of India 1961 on page 125 Konkani is classified as the dialect of Marathi. Vol. XI Mysore part II -c (i). In the Census of India

1951 in paper No. 1, under Travancore-Cochin there is a reference to Konkani on page 56 that as Konkani language spoken in the State and it is a dialect of Marathi it is likely that they have returned Marathi for Konkani. On page 71 in Col. 1 Marathi is given and its 34 dialects including Konkani are given in Col. No 2. In 1961 also it is there. It has not been over ruled. It is very clear that it has been treated as dialect even in the Census. But Mahajan did not want to go into these details.

Sri S. D. KOTHAVALE.—What about Konkani Conferences ?

Sri B. P. KADAM.—Sir, Konkani Conferences are nothing but paper conferences. Konkani is said to be predominantly spoken in Karwar and Supa. They fought the elections on this very issue for Taluk Boards. In Karwar and in Supa we have won almost unanimously. They have said that Konkani is a dialect of Marathi and Konkani is only for speaking purposes. Reference is made to Konkani Conferences where 3 or 4 people will be present and pass a resolution. These resolutions and conferences of Konkani, I do repeat, are paper Parishads and nothing further. Mysore Gazetteer, Vol. I, page 252 states that Konkani is a dialect of Marathi. On page 2 and page 11 of the Mysore Government Fact Finding Committee Report there is admission that Konkani is a dialect of Marathi

In the Memorandum of Mysore about Kasargod, they have referred Tulu as the dialect of Kannada. and added that just as Tulu is a dialect of Kannada, Konkani is a dialect of Marathi. The former Chairman of the Legislative Council, Calcutta Sri S. K. Chaterjee has said that Konkani comes under Marathi. The Director of Archaeology of Goa Dr. Pisurenker is an authority on this and he has also said so. Unfortunately, the conclusion of Mahajan is highly illogical and totally injudicious Justice Kincaid and Justice Ranade all say that Maharashtra extend up to Karwar and there are innumerable authorities. Brushing aside all this, Justice Mahajan says that Konkani is not a dialect of Marathi.

Sir, it has been said that Kaawar means North Kanara. It is not so. In Kanara Gazetteer page 154, part 2 and page 3, part I it is stated that Kanara extends only up to Gangavati and not beyond to the north. It has been stated that many thousands of Konkani speaking people have expressed their second language as Kannada. But, what about the Konkani speaking people in Karwar, Supa and Haliyal ? Only 12 per cent Konkani speaking people here know Kannada. When Sri Mahajan came there, all these things were brought to his notice. But he has denied the rights of those people, he has failed to recommend their rights to go to Maharashtra. Even though the entire Taluk Board members and Village Panchayat Chairmen from the Konkani-Marathi area of Karwar and Supa saw him no reference is made to them in Vol, I though the names are to be traced in Vol. II. Why this discrimination ? Some people who have no *locus standi*, their names are found. For example there is reference to one person who even stated in 1942 that he is not a Congressman just to evade arrest. Then he became a Council member and thereafter he was thrown some crums here or there. The

(SRI B. P. KADAM)

Congress fought the election at that place on linguistic basis and that Congress candidate from Karwar during the election spent a large sum of money but he suffered heavily.

SRI S. R. BOMMAI (Kundgol).—Point of order, Sir, just now the hon'ble member said that lakhs of money were spent for election in Karwar. How many lakhs were spent by Maharashtra on Sri B. P. Kadam's election ?

SRI B. P. KADAM.—I am happy he put that question. I may say that I have not taken any money from any body and never in my life. I have received finance for my election. No jeeps were taken and for the one or two taxis that I got, I paid them there hire. My expenses are well known. I am not in the habit of taking any money. I have self-respect and I have all along stood by it.

Then, Sir, Shri Mahajan says that while going about the area and consulting the opinion and wishes of the people, it is difficult to see that Konkani people understand Marathi. He says that no strong case was made out for merger of villages in Mysore. Unfortunately he stayed only in the T.Bs and never moved in Karwar and Supa area. He makes this reference which is most incorrect. He makes reference to a solitary member of Taluk Board but he does not makes a reference to several representatives from those areas. He refers to certain newspapers which are published somewhere in Konkani. But he fails to mention anything when it is a case of Marathi circulation of paper which is predominant in Marathi area. The Karwar Taluk lawyers have given representations but there is no reference to them. Is this fair ?

On page 132 he says that 93 per cent of Mysore's Forest Wealth is from Supa area is forest Supa is one of the 11 taluks of Karwar and it is difficult to understand how these reasonings can be accepted.

Then he makes a reference to Bidar and says that the Ekikarana Samiti has no support. It is a very uncharitable remark on the part of the Commission. About the Ekikarana Samiti he says that it is doing disservice and it is wielding pressure and so on. What has he to say about the Akhand Karnataka Samiti. Some of the respresentatives of Kasargod are my personal friends. He says that it is a very just organisation. How can it be tolerated ? How can it be toterated when he says that the M.E.S. wielded perssure on the villagers when we are under the control of the Government of Mysore and when there is a lot of pressure and victimisation ? What is the principle resorted to by the Commission ? He wants 70 to 80 per cent of marathi speaking people to go to Maharasthra from here but wants Kannada speaking people to come here if it is just over 50 per cent. Why this discrimination ? In south Sholapur the percentage is hardly over 51 per cent. He conveniently here suggests the census of 1951. The yardstick he has used is to suit his

own convenience to favour Mysore. Is this to be treated as award ? In my humble opinion the reference to Bidar is very uncharitable. He says that there was understanding between the leaders. May I ask what mandate or sanction had those leaders to come to an agreement ? Then some references are made to some Maharashtrians, that he has met some of them. He refers to elections of 1962 and 1967 and he says that Karwar and Belgaum elections are not be much respected. Why not ? In spite of harassment and all sorts of hardships, with tremendous majority they have won the elections. He comes to Bidar and says about the elections. What is all this ? I myself supported the resolution and said that Kasargod must come to Mysore. But when the elections have been won the Commission supports it here. What is the yardstick he has used ? It is only to suit his own convenience and to beat the Maharashtrians. Just to suit is own convenience and to favour Mysore, he has given this report. If by giving away Supa Mysore were to lose, he could have made recommendations that the Government of India should help Mysore. Are not the wishes of the people to be respected ? He has recommended the retention of some Kanapur villages to Karantak even though the Marathi-speaking people is over 86 per cent. In Haliyal the Marathi-speaking population is well over 61 per cent and yet it cannot be given to Maharashtra because the commission has his own consideration. In the Supa Taluka, in some places, the Marathi-speaking people are almost 90 to 100 per cent. In respect of 61 villages he says they have got no contiguity. Is this democracy ? I can certainly warn the Government of India that if they fail to respect the wishes of the people democratically expressed, they will have to pay heavily. It has long been enterained by the Government of India that they can beat Maharashtrians. That hope was entertained in history and those who made efforts to squeeze Maharashtra got their spine broken.

Sri S. R. KANTHI.—Who has broken their spine ?

Sri B. P. KADAM.—I spoke of history. If the Government of India still thinks of pursuing such efforts, I am sure it will have to pay very heavily. I say that the report is highly partisan, highly mischievous and highly injudicious and therefore it must be rejected by the Government of India and alternatively the Government of India must find a solution on democratic lines respecting the wishes of the people, language, contiguity and village as a unit. Otherwise, the people will lose faith in democracy and we will take to harsh methods which will be very bad for democracy, for everyone of us and for national integration.

† ಶ್ರೀ ಎಂ. ಎನ್. ಕೊಟ್ರಬಸವಯ್ಯ ಸೋಗಿ (ಹಡಗಲಿ).—ಸನ್ಮಾನ್ಯ ಸಭಾಪತಿಗಳೇ, ಈಗ ಮಾನ್ಯ ಸಭೆಯ ಮುಂದೆ ಚರ್ಚೆಯಾಗುತ್ತಿರುವ ಮೈಸೂರು-ಮಹಾರಾಷ್ಟ್ರ ಮತ್ತು ಮೈಸೂರು-ಕೇರಳ ಇವುಗಳ ಗಡಿ ವಿಷಯಕ್ಕೆ ಸಂಬಂಧಪಟ್ಟ ಹಾಗೆ ಜಸ್ಟೀಸ್ ಮಹಾಜನ್‌ರವರು ಕೊಟ್ಟಿರತಕ್ಕ ಈ ಅಮೂಲ್ಯ ವರದಿಯನ್ನು ಅವಲೋಕನ ಮಾಡಿ ಇದರ ಬಗ್ಗೆ ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುವ ಮುನ್ನ ಇಂದು ನಮ್ಮ ಕಣ್ಮರೆಯಾಗಿರತಕ್ಕ ಕೀರ್ತಿಶೇಷರಾದ ಜಸ್ಟೀಸ್ ಮಹಾಜನ್‌ರವರಿಗೆ ನನ್ನ ಶ್ರದ್ಧಾಂಜಲಿಯನ್ನರ್ಪಿಸಿ--ನಾನು ನನ್ನ ಕೆಲವು ವಿಚಾರಗಳನ್ನು ಸಭೆಯ ಮುಂದೆ ವ್ಯಕ್ತಪಡಿಸುವುದ , ಇಚ್ಛಿಸುತ್ತೇನೆ.

(ಶ್ರೀ ಎಂ. ಎನ್. ಕೊಟ್ರಬಸವಯ್ಯ ಸೋಗಿ)

ಈ ದಿವಸ ನಾವು ಚರ್ಚೆ ಮಾಡತಕ್ಕ ಈ ವರದಿಯೇನಿದೆ ಇದನ್ನು ತಯಾರಿಸಿದವರು ನಮ್ಮ ದೇಶದ ಅತ್ಯುನ್ನತ ನ್ಯಾಯಸ್ಥಾನದಲ್ಲಿದ್ದಂಥ ಅತ್ಯುನ್ನತ ನ್ಯಾಯಪರಾಯಣರು ಹಾಗೂ ಕೀರ್ತಿ ವೆತ್ತ ಮಹಾವ್ಯಕ್ತಿ ಅವರು. ಅವರು ವಿಚಾರ ವಿಮರ್ಶೆಗೆ ಹೆಸರಾಂತ ವ್ಯಕ್ತಿಗಳು. ಅಂಥಾ ಮಹಾ ಪುರುಷರು ಕೊಟ್ಟಿರತಕ್ಕ ವರದಿಗೆ ನಾವು ಈ ದಿವಸ ಬೆಲೆಯನ್ನು ಮರ್ಯಾದೆಯನ್ನು ಕೊಡದಿದ್ದರೆ ಅದನ್ನು ಒಪ್ಪದಿದ್ದರೆ ನಾವು ದಿವಂಗತರ ಆತ್ಮಕ್ಕೆ ಬಹಳ ಅನ್ಯಾಯ ಮಾಡಿದ ಹಾಗೆ ಆಗುತ್ತದೆ. ಅಷ್ಟೇ ಅಲ್ಲದೆ ನಾವು ನ್ಯಾಯಕ್ಕೆ ಒಂದು ಚ್ಯುತಿಯನ್ನುಂಟುಮಾಡಿದ ಹಾಗೆ ಆಗುತ್ತದೆ. ಆ ದಿವಂಗತರ ಆತ್ಮಕ್ಕೆ ಒಂದು ಚಿರಶಾಂತಿ ದೊರೆಯಬೇಕೆಂಬುದಾಗಿದ್ದರೆ ಅವರ ಈ ಮಹತ್ತರವಾದ ವರದಿಯನ್ನು ಎಲ್ಲರೂ ಒಪ್ಪಲೇಬೇಕು. ಹಾಗಿಲ್ಲವಾದರೆ ನಮ್ಮ ಜನರಿಗೆ ಬೆಲೆಯಿರುವುದಿಲ್ಲ. ಮತ್ತು ಈ ದೇಶದಲ್ಲೇ ನ್ಯಾಯಕ್ಕೆ ಬೆಲೆಯಿಲ್ಲವೆಂಬ ಅಪಕೀರ್ತಿ ಬಂದೀತು. ಆದುದರಿಂದ ಇಂಥಾ ಒಂದು ಮಹತ್ತರವಾದ ತೀರ್ಮಾನಕ್ಕೆ ದೇಶದಲ್ಲಿ ಎಲ್ಲರೂ ಬೆಲೆ ಕೊಡಲೇಬೇಕು ಇದನ್ನು ಎಲ್ಲರೂ ಮಾನ್ಯ ಮಾಡಲೇಬೇಕು. ಈ ಒಂದು ಆಯೋಗವನ್ನು ನೇಮಿಸತಕ್ಕ ಕಾಲದಲ್ಲಿ ಆ ಮಹಾಜನ್‌ರವರು ಆ ಕೇಂದ್ರ ಸರ್ಕಾರಕ್ಕೆ ಒಂದು ಷರತ್ತನ್ನು ಹಾಕಿದ್ದರೆಂದು ಕೇಳುತ್ತೇನೆ. ಅವರ ಆ ಷರತ್ತೇನೆಂದರೆ ಅವರು ಕೊಡತಕ್ಕ ವರದಿಯೇನಿರುತ್ತದೆ ಅದನ್ನು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಒಪ್ಪುವುದಾದರೆ ಮಾತ್ರ ಅವರು ಆ ಕೆಲಸವನ್ನು ಒಪ್ಪಿಕೊಳ್ಳುವುದಾಗಿ ಒಂದು ಷರತ್ತನ್ನು ಹಾಕಿದ್ದರಂತೆ. ಹಾಗೆ ಅಂಥಾ ಒಂದು ಷರತ್ತಿಗೆ ಒಳಗಾಗಿ ಅವರೀ ಕೆಲಸವನ್ನು ಒಪ್ಪಿಕೊಂಡಿದ್ದಾರೆಂದು ನಾನು ವರ್ತಮಾನ ಕೇಳುತ್ತೇನೆ. ಆದುದರಿಂದ ಈ ದಿವಸ ಆ ಕೇಂದ್ರ ಸರ್ಕಾರದವರೂ ಕೂಡ ಇದನ್ನು ಒಂದು ಮಹತ್ವ ತೀರ್ಮಾನವೆಂದು ಅಂಗೀಕರಿಸುವರೆಂಬ ನಂಬಿಕೆ ನನಗಿದೆ. ಹಾಗೊಂದುವೇಳೆ ಈ ದಿವಸ ಅವರು ಇದನ್ನು ಒಪ್ಪಿಕೊಳ್ಳದಿದ್ದರೆ ಇನ್ನು ಮುಂದೆ ಕೇಂದ್ರ ಸರ್ಕಾರದವರು ನೇಮಕ ಮಾಡತಕ್ಕ ಯಾವ ಒಂದು ಕಮಿಷನ್ನಿಗಾದರೂ ಏನು ಬೆಲೆಯಿರುತ್ತದೆ ? ಮಹಾಜನ್‌ರವರಾದರೂ ಅಂತಿಂಥ ಸಣ್ಣ ಪುಟ್ಟ ನ್ಯಾಯಮೂರ್ತಿಗಳಾಗಿರಲಿಲ್ಲ. ಅವರು ಉಚ್ಚನ್ಯಾಯಾಲಯದಲ್ಲಿ ಉಚ್ಚ ನ್ಯಾಯಾಧೀಶರಾಗಿದ್ದವರು. ಮಹಾಜನ್‌ರವರು ಹಿಂದೆ ನಮ್ಮ ದೇಶದಲ್ಲಿ ಖ್ಯಾತಿವೆತ್ತ ಜನರಲ್ಲಿ ಒಬ್ಬರಾಗಿದ್ದರು. ನಮ್ಮ ಭಾರತ ದೇಶವು ಇಬ್ಭಾಗವಾದಾಗ ಆ ಸಮಿತಿಯಲ್ಲಿ ಮಹಾಜನ್ ಅವರು ಮತ್ತು ಸರ್ ಸೇರಿಲ್ ರ್‍ಯಾಡ್‌ಕ್ಲಿಫ್‌ರವರೂ ಸದಸ್ಯರಾಗಿದ್ದರು. ಆದುದರಿಂದ ಇವರು ಈ ಗಡೀ ವಿವಾದಗಳಲ್ಲಿ ಅತ್ಯಂತ ಪರಿಣತರೆಂದು ಹೇಳಬಹುದು. ಇಡೀ ಇಂಡಿಯಾ ದೇಶಕ್ಕೇ ಒಂದು ದೊಡ್ಡ ಸಮಸ್ಯೆ ಎನಿಸಿದ್ದ ಕಾಶ್ಮೀರದ ಸಮಸ್ಯೆಯನ್ನು ಸುಗಮವಾಗಿ ಬಿಡಿಸಿದವರಿವರು. ಇವರು ಕಾಶ್ಮೀರದ ಪ್ರಧಾನಿಗಳಾಗಿಯೂ ಕೆಲಸ ಮಾಡಿದ್ದಾರೆ. ಇಂಥಾ ಒಬ್ಬ ದೊಡ್ಡ ಪ್ರತಿಭಾಶಾಲಿಗಳಿವರು. ಇವರು ಕೊಟ್ಟಿರತ್ಕಂಥ ಒಂದು ತೀರ್ಪನ್ನು ಸರ್ಕಾರಗಳು ಒಪ್ಪದಿದ್ದರೆ ಅವರಿಗೆ ನಾವು ಬಹಳ ಅಪಚಾರವನ್ನು ಮಾಡಿದಹಾಗಾಗುತ್ತದೆ. ಆದರೆ ಈ ಹಿಂದೆ ಮಾತನಾಡಿದ ಶ್ರೀ ಕದಂ ಅವರು ಅವರ ಬಗ್ಗೆ ಕೆಲವು ಅಲ್ಲಸಲ್ಲದ ಮಾತುಗಳನ್ನಾಡಿದ್ದಾರೆ. ಇವರು ಹೇಳುವ ಹಾಗೆ ಆ ಮಹಾಜನ್ ರವರು ಪಕ್ಷಪಾತಿಗಳೆಂದು ಇವರಿಗೆ ಗೊತ್ತಿದ್ದರೆ ಇವರು ಮೊದಲು ಅವರ ನೇಮಕ ಕಾಲದಲ್ಲಿ ಏಕೆ ಸುಮ್ಮನಿದ್ದರು ? ಮಹಾರಾಷ್ಟ್ರದ ಮುಖ್ಯ ಮಂತ್ರಿಗಳಾಗಲಿ ಅಥವಾ ಇನ್ನಾವ ಮಹಾರಾಷ್ಟ್ರದ ಮುಖಂಡರಾಗಲೀ ಆ ದಿವಸ ಇವರ ಆಯೋಗದ ನೇಮಕಕ್ಕೆ ಏಕೆ ವಿರೋಧವನ್ನು ವ್ಯಕ್ತಪಡಿಸಲಿಲ್ಲ ! ಆ ದಿವಸ ಇವರನ್ನು ನೇಮಿಸಿದ್ದು ಯಾರ ಒತ್ತಾಯಕ್ಕಾಗಿ ? ಮಹರಾಷ್ಟ್ರೀಯರ ಒತ್ತಾಯಕ್ಕೆ ಮಣಿದು ಕೇಂದ್ರ ಸರ್ಕಾರದವರು ಈ ಆಯೋಗವನ್ನು ರಚಿಸಬೇಕಾಗಿ ಬಂದಿತು. ಮೈಸೂರಿನವರು ಮೊದಲು ಇದಕ್ಕೆ ಒಪ್ಪಲೇ ಇಲ್ಲ. ಹಾಗಿದ್ದರೂ ನಮ್ಮ ನಾಯಕರಾದ ಶ್ರೀ ಎಸ್. ನಿಜಲಿಂಗಪ್ಪ ನವರು ಒಂದು ರಾಷ್ಟ್ರಾಭಿಮಾನಕ್ಕೆ ಕಟ್ಟುಬಿದ್ದು ದೇಶದಲ್ಲಿ ನ್ಯಾಯಕ್ಕೊಂದು ಬೆಲೆ ಇರಲಿ, ಜನತೆಯ ಜೀವನ ಒಂದು ಸಂಭಾವಿತ ರೀತಿಯಲ್ಲಿ ನಡೆಯಲಿ ಎಂಬ ಅಭಿಮಾನದಿಂದ ಇದಕ್ಕೆ ಒಪ್ಪಿಗೆ ಕೊಟ್ಟರು. ಆದರೆ ಯಾವ ಒಂದು ಆಯೋಗಕ್ಕೇ ಅಗಲಿ ಒಂದು ಗೆರೆಯನ್ನು ಕೊರೆದಹಾಗೆ ಈ ಗಡೀ ಪ್ರಶ್ನೆ ಯನ್ನು ತೀರ್ಮಾನ ಮಾಡುವುದಕ್ಕೆ ಸಾಧ್ಯವಿಲ್ಲ. ಇದು ಅಂಥಾ ವಿಚಾರವಲ್ಲ. ಇದರಲ್ಲಿ ಎರಡೂ ಪಾರ್ಟಿಗಳು ಒಂದು ಒಮ್ಮತದಿಂದ ನಡೆದರೆ ಸಾಧ್ಯವೇ ವಿನಾ ಇಲ್ಲದಿದ್ದರೆ ಅದು ಬಹಳ ಕಷ್ಟಕ್ಕೆ ಬರುತ್ತದೆ. ದೇಶದಲ್ಲಿರುವ ಜನರ ಪ್ರೀತಿ ವಿಶ್ವಾಸಗಳನ್ನು ಕಲಕುವಂತಹ ಪರಿಸ್ಥಿತಿ ಬಂದರೂ ಬರಬಹುದು. ಕಾನೂನುಬದ್ಧವಾಗಿರುವಂತೆ ಮಾಡುವುದನ್ನು ಬಿಟ್ಟು might is right ಎನ್ನುವಂತೆ ಶಕ್ತಿ ಪ್ರದರ್ಶನ ಮಾಡುವ ಕಾಲ ಹಿಂದೆ ಒಂದು ಕಾಲದಲ್ಲಿ ಇತ್ತು. ನಮ್ಮ ಮಾನ್ಯ ಸದಸ್ಯರಾದ ಶ್ರೀಮಾನ್ ಕಂದಂರವರು ಇಲ್ಲಿ ಮಾತನಾಡುತ್ತಾ ಇತಿಹಾಸದ ಆಧಾರಗಳನ್ನು ಇಲ್ಲಿ ಹೇಳಿದರು. ಅವರು ಶಿವಾಜಿ ಮಹಾರಾಜರು ಹಾಗೂ ಕಿತ್ತೂರು ರಾಣಿ ಚನ್ನಮ್ಮ ಮುಂತಾದವರ ಇತಿಹಾಸಗಳನ್ನು ಇಲ್ಲಿ ಉಲ್ಲೇಖಿಸುತ್ತಾ ಹೇಳಿದರು ಮತ್ತು ಇತಿಹಾಸದಿಂದ ಸಮರ್ಥನೆ ಮಾಡುವು

ದಕ್ಕೊ ಹೊರಟರು. ಹಿಂದೆ ಇದ್ದ ಇತಿಹಾಸಗಳನ್ನು ಇಂದು ನೆನಪು ಮಾಡಿಕೊಂಡು ಜೀವನವನ್ನು ನಡೆಸುವುದಕ್ಕೆ ಸಾಧ್ಯವಿಲ್ಲ ಎನ್ನುವ ಪರಿಸ್ಥಿತಿ ಈಗ ಬಂದಿದೆ. ಇದನ್ನು ತಿಳಿದುಕೊಳ್ಳಬೇಕು. There was an age when the conquest was ruling, but this is an age of reasoning.

5-00 P.M.

ಇಲ್ಲಿ ಜನತೆಯ ಅಭಿಪ್ರಾಯಕ್ಕೆ ಮನ್ನಣೆ ಕೊಡಬೇಕು ಮತ್ತು ಒಂದು ವಿವೇಕಪೂರ್ಣವಾದ ಮಾತಿಗೆ ಬೆಲೆ ಕೊಡಬೇಕು. ಕೇವಲ ಶಕ್ತಿ ಸಾಮರ್ಥ್ಯಗಳ ಪ್ರದರ್ಶನಕ್ಕೆ ಅವಕಾಶ ಕೊಡಬಾರದು. ಹಿಂದೆ ಇದ್ದ ರಾಜರುಗಳಲ್ಲಿ ರಾಜ್ಯವನ್ನು ವಿಸ್ತಾರ ಮಾಡಬೇಕು ಎನ್ನುವ ರಾಜ್ಯ ದಾಹ ಇತ್ತು. ಇಂದು ರಾಜ್ಯವನ್ನು ಆ ರೀತಿ ವಿಸ್ತಾರ ಮಾಡುವುದಲ್ಲ. ಈಗ ಪ್ರತಿಯೊಂದು ವಿಚಾರವನ್ನೂ ವಿವೇಕಯುತವಾಗಿ ವಿವೇಕಪೂರ್ಣವಾಗಿ ವಿಚಾರಮಾಡುವ ದೃಷ್ಟಿಯಿಂದ ನೋಡಬೇಕಾದ ಕಾಲ ಬಂದಿದೆ. ಇಂತಹ ಕಾಲದಲ್ಲಿ ನಮ್ಮ ಕರ್ತವ್ಯವನ್ನು ಸರಿಯಾಗಿ ನಿರ್ವಹಿಸಬೇಕು. There was an age when might was right, but now right is might. ಮೈಟ್ ಈಸ್ ರೈಟ್ ಎನ್ನುವ ಕಾಲವೇ ಒಂದು ಹಿಂದೆ ಇತ್ತು. ಈಗ ಸತ್ಯವೇ ನಮಗೆ ಶಕ್ತಿಯಾಗಿದೆ. ನಿಜವಾದ ದಾರಿಯಲ್ಲಿ ಇವೊತ್ತು ನಾವು ಮಾರ್ಗದರ್ಶನ ಮಾಡಿ ಒಳ್ಳೆಯ ದಾರಿಯಲ್ಲಿ ಹೋಗಬೇಕು. ಬರೀ ಪುಂಡುಗಾರಿಕೆ ಹಾಗೂ ಒತ್ತಡಗಳಿಂದ ಇದನ್ನು ಪರಿಹರಿಸ ಬೇಕೆಂದು ಮಾಡುವುದಾದರೆ ಇದು ಮೂರ್ಖತನವಾದೀತು. ಈ ದೃಷ್ಟಿಯಿಂದ ನಾವು ಈ ವರದಿಯನ್ನು ವಿಚಾರ ಮಾಡುವುದು ಅತ್ಯಾವಶ್ಯಕ. ಇತಿಹಾಸ ಮತ್ತು ಸಂಶೋಧನೆಗಳನ್ನು ನಾವು ನೋಡು ವುದಾದರೆ, ಈಗ ಇರುವ ಪುಣೆಯನ್ನೂ ದಾಟಿ ನಮ್ಮ ಕರ್ಣಾಟಕ ರಾಜ್ಯ ಇತ್ತು ಎನ್ನುವುದು ಗೊತ್ತಾಗುತ್ತದೆ. ಅಲ್ಲದೆ ಪುಣೆಯಿಂದ ಸ್ವಲ್ಪ ಹತ್ತಿರದಲ್ಲೇ ಒಂದು ಊರಿದೆ. ಇದರ ಹೆಸರು 'ಕನ್ನಡ' ಎಂದೇ ಇದೆ. ಈಗ ಇದು ಮಹಾರಾಷ್ಟ್ರದಲ್ಲಿ ಇದೆ. ನಮ್ಮ ಮಹಾರಾಷ್ಟ್ರದಲ್ಲೇ ದೊಡ್ಡ ನಾಯಕ ರಾಗಿದ್ದ ಶ್ರೀ ಬಾಲಗಂಗಾಧರ ತಿಲಕ್ ಎನ್ನುವವರು ಒಂದು ಕಡೆ ಹೇಳಿದ್ದಾರೆ. ಅದು ಕನ್ನಡ ಹಾಗೂ ಕರ್ನಾಟಕ ರಾಜ್ಯ ಬೆಳಗಾಂ ಹಾಗೂ ಪುಣೆಯನ್ನು ಒಳಗೊಂಡು ಇತ್ತು ಮತ್ತು ಕರ್ಣಾಟಕದ ಕನ್ನಡ ಭಾಷೆ ಬಹಳ ಸುಂದರವಾದುದು ಮತ್ತು ಪುಣೆ ಕೂಡ ಕರ್ಣಾಟಕದಲ್ಲಿತ್ತು ಎಂದು ಶ್ರೀ ಆಲೂರು ವೆಂಕಟರಾಯರು ಬರೆದಿರುವ 'ಕರ್ಣಾಟಕದ ಗತ ವೈಭವ' ಎನ್ನುವ ಪುಸ್ತಕ ದಲ್ಲಿದೆ. ಬೇಕಾದರೆ ಯಾರು ಬೇಕಾದರೂ ಅದನ್ನು ಓದಿ ತಿಳಿದುಕೊಳ್ಳಬಹುದು. ಸಾಂಸ್ಕೃತಿಕ ದೃಷ್ಟಿ ಯಿಂದ ಹಾಗೂ ಐತಿಹಾಸಿಕ ದೃಷ್ಟಿಯಿಂದ ನ್ಯಾಯಪೂರ್ಣವಾದ ದೃಷ್ಟಿಯಿಂದ ವಿವೇಕಪೂರ್ಣವಾದ ದೃಷ್ಟಿಯಿಂದ ಕೊಟ್ಟಿರುವ ಮಹಾಜನ್‌ರವರ ತೀರ್ಪು ನ್ಯಾಯಬದ್ಧವಾಗಿದೆ. ಅಂತಹ ತೀರ್ಪಿನ ವಿಷಯದಲ್ಲಿ ಮಹಾರಾಷ್ಟ್ರದವರು ಇಷ್ಟು ಲಘುವಾಗಿ ಮಾತನಾಡಬಾರದು. ಇದನ್ನು ಯಾರೇ ಆಗಲೀ ಸಂಪೂರ್ಣವಾಗಿ ಒಪ್ಪಬೇಕು. ಇಂತಹ ಒಂದು ವರದಿಯನ್ನು ಅವರು ನಮಗೆ ಇಲ್ಲಿ ಕೊಟ್ಟಿದ್ದಾರೆ. ಇದರಲ್ಲೂ ನಮ್ಮ ಮಾನ್ಯ ನ್ಯಾಯಾಧೀಶರಾಗಿದ್ದ ಶ್ರೀಮಾನ್ ಮಹಾಜನ್‌ರವರು ಗಡಿ ವಿವಾದಗಳಿಗೆ ಒಳಗಾಗಿರುವ ಎಲ್ಲ ಭಾಗಗಳಿಗೂ ಸಂಚಾರ ಮಾಡಿ ಸುಮಾರು 2240 ಮನವಿ ಗಳನ್ನು ಪಡೆದಿದ್ದಾರೆ ಮತ್ತು ಸುಮಾರು 7500 ಜನಗಳನ್ನು ಭೇಟಿ ಮಾಡಿ ಅವರಿಂದ ಅಭಿಪ್ರಾಯ ಗಳನ್ನು ಪಡೆದಿದ್ದಾರೆ ಮತ್ತು ಎಲ್ಲ ವಿಚಾರಗಳನ್ನೂ ವಿಮರ್ಶೆಮಾಡಿ ಇಂತಹ ಒಂದು ಒಳ್ಳೆಯ ತೀರ್ಮಾನವನ್ನು ಕೊಟ್ಟಿರುವುದರ ಬಗ್ಗೆ ಇಷ್ಟು ಲಘುವಾಗಿ ಇಲ್ಲಿ ಮಾತಾಡಬಾರದು. ನಿಜ ವಾಗಿಯೂ ಇದು ಒಂದು ಒಳ್ಳೆಯ ವರದಿಯಾಗಿದೆ. ಮಹಾರಾಷ್ಟ್ರದವರು ಇಂತಹ ವಿವೇಕಬದ್ಧ ವಾದ ತೀರ್ಪನ್ನು ಒಪ್ಪಬೇಕು ಇಲ್ಲದೆ ಹೋದರೆ ಇದು ಒಂದು ವಿರೋಧಾಭಾಸವಾಗುತ್ತದೆ. ಮಾನ್ಯ ಮಹಾಜನ್ ಕೊಟ್ಟಿರುವುದನ್ನು ನಾನು ಆಖೈರು ತೀರ್ಪು ಎಂದೇ ಹೇಳುತ್ತೇನೆ. ಇದನ್ನೇ ಒಂದು ಅವಾರ್ಡ್ ಆಗಿ ಒಪ್ಪಿಕೊಳ್ಳುವುದು ಸಾಧುವಾಗಿದೆ. ಅಷ್ಟೇ ಅಲ್ಲ ಮೈಸೂರಿನವರು ಇದನ್ನು ಒಪ್ಪುವುದೇ ಅಲ್ಲ, ಮೈಸೂರಿನವರು ಹಾಗೂ ಮಹಾರಾಷ್ಟ್ರದವರು ಇಬ್ಬರೂ ಒಪ್ಪಿಕೊಳ್ಳ ಬೇಕು. ಇಲ್ಲದೇ ಇದ್ದರೆ ಈ ಗಡಿ ವಿವಾದ ಬಗೆಹರಿಯುವುದಿಲ್ಲ. ಇದು ಗಡಿ ವಿವಾದವಲ್ಲ ಎಂದು ಶಕ್ತಿ ಪ್ರದರ್ಶನ ಮಾಡುವುದು ಸರಿಯಲ್ಲ. ಇದರಿಂದ ಇಲ್ಲದ ಸಮಸ್ಯೆಗಳು ಉದ್ಭವವಾಗುತ್ತವೆ. ನಮ್ಮ ದೇಶದ ಇತರ ಆರ್ಥಿಕ ಸಮಸ್ಯೆಗಳಿಗೆ ಹೆಚ್ಚು ಗಮನ ಕೊಡುವುದಕ್ಕೆ ಬದಲಾಗಿ ಇಂತಹ ಕ್ಷುಲ್ಲಕ ಸಮಸ್ಯೆಗಳ ಕಡೆಗೆ ಗಮನ ಕೊಡಬಾರದು. ಇದರಿಂದ ದೇಶದ ಐಕ್ಯತೆಗೆ ತೊಂದರೆ ಬರುತ್ತದೆ. ಈ ದೃಷ್ಟಿಯಿಂದ ಕೇಂದ್ರ ಸರಕಾರದವರು ಈ ವರದಿಯನ್ನು ಒಪ್ಪಿಕೊಳ್ಳಬೇಕು ಎನ್ನುವ ಮಾತನ್ನು ಅವರಿಗೆ ಒತ್ತಿ ಹೇಳಬೇಕು. ನಮ್ಮ ಮುಖ್ಯ ಮಂತ್ರಿಗಳು ಹೇಳಿದ ಹಾಗೆ ಈ ವಿವಾದಗಳನ್ನು ಇಲ್ಲಿಗೇ ಅಂತ್ಯಗೊಳಿಸಬೇಕು. ಇಲ್ಲದೆ ಇದ್ದರೆ ಇತರ ವಿವಾದಗಳಿಗೆ ಎಡೆಕೊಟ್ಟು ಈ ವಿವಾದಗಳು ಇತ್ಯರ್ಥವಾಗದೇ ಹೋಗಬಹುದು. ಇಲ್ಲಿ ಇನ್ನೊಂದು ಮುಖ್ಯ ಮಾತನ್ನು ಹೇಳ

(ಶ್ರೀ ಎಂ. ಎಸ್. ಕೊಟ್ರಬಸವಯ್ಯ ಸೋಗಿ)

ಬೇಕಾಗಿದೆ. ಈಗ ಗಡಿ ವಿವಾದವನ್ನು ಇತ್ಯರ್ಥ ಮಾಡುವುದು ಕೇಂದ್ರದ ಗೃಹಮಂತ್ರಿಗಳಾದ ಶ್ರೀ ಚವಾಣರ ಕೈಯಲ್ಲಿದೆ. ಇವರು ಮಹಾರಾಷ್ಟ್ರದವರೇ ಆಗಿರುವುದರಿಂದ ಈ ಗಡಿ ವಿವಾದವನ್ನು ತೀರ್ಮಾನ ಮಾಡುವಾಗ ಇದನ್ನು ಬೇರೆಯವರಿಗೆ ವಹಿಸಿಕೊಡಲು ಅನುಕೂಲವಾಗುವಂತೆ ಇವರು ಗೃಹ ಮಂತ್ರಿಗಳ ಪದವಿಯನ್ನು ಈ ವಿವಾದ ಅಂತ್ಯವಾಗುವವರೆಗೆ ಬಿಡುವುದು ಯುಕ್ತವಾಗಿದೆ. ಇಲ್ಲದೇ ಇವರ ಕೈಯಲ್ಲೇ ಗಡಿ ವಿವಾದಗಳೂ ಇದ್ದರೆ ಇದು ಸರಿಯಾಗಿ ತೀರ್ಮಾನವಾಗುವುದಿಲ್ಲ. ಅಲ್ಲದೇ ಮಹಾರಾಷ್ಟ್ರದವರೇ ಆಗಿರುವ ಶ್ರೀ ಚವಾಣರಲ್ಲಿ ಮಹಾರಾಷ್ಟ್ರದ ರಕ್ತ ಪೂರ್ತಿಯಾಗಿರುವುದರಿಂದ ಅವರು ನಿಷ್ಪಕ್ಷಪಾತವಾದ ತೀರ್ಮಾನವನ್ನು ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಮಹಾಜನ್ ವರದಿ ತೀರ್ಮಾನವಾಗುವವರೆಗಾದರೂ ಅವರನ್ನು ಗೃಹ ಮಂತ್ರಿಗಳ ಪದವಿಯಿಂದ ದೂರ ಇಡುವುದು ಉತ್ತಮ ಎಂದು ನಾನು ಇಲ್ಲಿ ಸಲಹೆ ಮಾಡತ್ತಿದ್ದೇನೆ. ಅಲ್ಲದೆ ಶ್ರೀಮಾನ್ ಚವಾಣರವರು ಈಗಾಗಲೇ ಈ ವರದಿ ಬಗ್ಗೆ ಹೇಳಿರುವ ಮಾತುಗಳಿಂದ ಅವರ ಅಭಿಪ್ರಾಯಗಳೇನು ಎನ್ನುವುದು ಎಲ್ಲರಿಗೂ ಗೊತ್ತಾಗುತ್ತಿದೆ. ಆದುದರಿಂದ ಗಡಿ ವಿವಾದ ಪೂರ್ಣವಾಗುವವರೆಗೆ ಇವರನ್ನು ಗೃಹ ಮಂತ್ರಿ ಪದವಿಯಿಂದ ಬಿಡಿಸುವುದು ಅಗತ್ಯವಾಗಿದೆ. ಎಂದಾದರೂ ಒಂದು ದಿವಸ ಈ ಗಡಿ ವಿವಾದಗಳು ಅಂತ್ಯವಾಗಲೇ ಬೇಕು ಇದನ್ನು ಈಗಲೇ ಮುಗಿಸುವುದು ಉತ್ತಮ. ಇದನ್ನು ಮುಗಿಸಿದರೆ ನಾವು ದೇಶದ ಇತರ ಮುಖ್ಯವಾದ ಆರ್ಥಿಕ ಸಮಸ್ಯೆಗಳಿಗೆ ಗಮನಕೊಡಲು ಅವಕಾಶ ಸಿಗುತ್ತದೆ. ಸಂಬಂಧಪಟ್ಟವರೆಲ್ಲರೂ ಇದನ್ನು ಪೂರ್ಣವಾಗಿ ಒಪ್ಪಬೇಕು. ಮಹಾಜನ್‌ರವರು ಎಲ್ಲ ಭಾಗಗಳನ್ನೂ ಸುತ್ತಿ ಒಂದು ಮಹತ್ತರವಾದ ವರದಿಯನ್ನು ಕೊಟ್ಟಿದ್ದರೂ ಅದರಲ್ಲಿ ನಮಗೆ ಬಹು ಲಾಭದಾಯಕವಾದ ಪ್ರದೇಶಗಳು ಕೂಡ ನಮ್ಮ ಕೈ ಬಿಟ್ಟು ಹೋಗುತ್ತಿವೆ. ಅದರಲ್ಲೂ ಬಹಳ ಸಂಪದ್ಭರಿತವಾದ ಭಾಗಗಳು ಈಗ ಮಹಾರಾಷ್ಟ್ರದವರ ಕಡೆಗೆ ಹೋಗುತ್ತದೆ. ಅದರಲ್ಲೂ ಷೋಲಾಪುರ, ನಿಪ್ಪಾಣಿ ಇಂತಹ ಮುಖ್ಯ ಭಾಗಗಳು ಹೋಗುತ್ತಿರುವುದು ಬಹು ವ್ಯಸನಕರವಾಗಿದೆ. ಆದರೂ ಒಂದು ವಿವೇಕಯುತವಾದ ದೃಷ್ಟಿಯಿಂದ ಇದನ್ನು ಪರಿಹರಿಸಬೇಕೆಂದು ಇದನ್ನು ನಾವು ಸಂಪೂರ್ಣವಾಗಿ ಒಪ್ಪಬೇಕೆಂದು ನಾನು ಎಲ್ಲರಲ್ಲಿಯೂ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ನಮ್ಮ ಮಹಾರಾಷ್ಟ್ರದ ಮಿತ್ರರಿಗೆ ನಾನು ಹೇಳುವುದು ಒಂದು ಗಡಿ ಹೊಂದಾಣಿಕೆಯಲ್ಲಿ ರಾಜ್ಯಗಳನ್ನು ನಡೆಸಬೇಕೇ ವಿನಾ ಇದನ್ನು ಒಂದು ಗೊಂಬೆಯಾಟದಂತೆ ಮಾಡಬಾರದು. ಇದರಿಂದ ಒಂದು ಅನಿಶ್ಚಿತ ಪರಿಸ್ಥಿತಿಯುಂಟಾಗಲು ಕಾರಣವಾಗುತ್ತದೆ. ನಿಜವಾಗಿಯೂ ಒಂದು ಒಳ್ಳೆಯ ತೀರ್ಪು ನಮ್ಮ ಮುಂದೆ ಬಂದಿರುವಾಗ ಇದನ್ನು ನಾವೆಲ್ಲರೂ ಪರಸ್ಪರ ಪ್ರೀತಿ ವಿಶ್ವಾಸಗಳಿಂದ ಇಡೀ ದೇಶದ ಸಮಸ್ಯೆಗಳನ್ನು ಪರಿಹರಿಸುವ ಒಂದು ದೃಷ್ಟಿಯಿಂದ ಈ ವರದಿಯನ್ನು ಇನ್ ಟೋಟೋ ಹಾಗೇ ಒಪ್ಪಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

SRI S. R. KANTHI.—Sir, I want to say certain things about Justice Mahajan. Hon'ble Member, Sri Kadam says that Sri Mahajan has made unfavourable remarks to Maharashtra and that he was prejudiced against Maharashtra. I have got a copy of the book—Autobiography of Justice Mahajan written in 1954, from which his sincerity and integrity can be judged. He has also made unfavourable remarks to Mysore. Why should we think in terms of Mysore alone ? Is it not unfair to make such remarks ? Why should my friend Sri Kadam say that the hon'ble ex-Chief Justice of India has made unfavourable remarks against Maharashtra ? After all, these things should not be taken into consideration. These have come in due course and I don't think there is a sense of justice in saying in any way that Sri Mahajan was prejudiced against Maharashtra. The report is very fair.

†ಶ್ರೀ ಕೆ. ಎಚ್. ಪಾಟೀಲ್ (ಗದಗ್).—ಮಾನ್ಯ ಸಭಾಪತಿಗಳೇ, ಇವತ್ತಿನ ದಿವಸ ನಮ್ಮ ನಾಡಿನ ಗಡಿ ನಿರ್ಧಾರದ ವಿಷಯದಲ್ಲಿ ಬಂದಂಥ ಒಂದು ವಾದ, ವಿವಾದದ ನಿರ್ಣಯದ ಬಗ್ಗೆ ನಮ್ಮ ರಾಜ್ಯ ಹಾಗೂ ಕೇಂದ್ರ ಸರ್ಕಾರ—ಇವೆರಡಕ್ಕೂ ಸಹಾಯವನ್ನು ಒದಗಿಸಲು ಬಿನ್ನಹ ಮಾಡಿಕೊಂಡ ದಿವಂಗತ ಮಹಾಜನ್ ಅವರು ಕೊಟ್ಟಂಥ ವರದಿಯನ್ನು ವಿಚಾರ ಮಾಡುವ ದೌರ್ಭಾಗ್ಯ ನಮ್ಮ ಎದುರಿಗೆ ಬಂದಿದೆ. ಅವರು ಈಗ ಜೀವಂತರಾಗಿದ್ದರೆ ನಿಜವಾಗಿ ಬಹಳ ಚೆನ್ನಾಗಿತ್ತು.

ಮೈಸೂರು ರಾಜ್ಯದ ವಿರೋಧಪಕ್ಷದವರು ಮಹಾಜನ್ ಕಮಿಷನ್ನಿನವರ ಎದುರಿಗೆ ಹೋಗಿ ತಮ್ಮ ಸಾಕ್ಷಿ ಪುರಾವೆಗಳನ್ನು ಕೊಟ್ಟಿದ್ದರೂ ಸಹ, ಮಹಾಜನ್ ಅವರು ವರದಿಯ ಬಗ್ಗೆ ಅಷ್ಟೊಂದು ವ್ಯವಹಾರವನ್ನು ಮಾಡಿ ದೇಶಾದ್ಯಂತ ಯಾರು ಮಹಾಜನರನ್ನು ಸ್ವಾಗತ ಮಾಡಿ, ಕಮಿಷನ್ ಬೇಕು ಎಂದು ಹೇಳಿ, ಅವರನ್ನು ನೇಮಿಸಿಕೊಂಡು ಅವರಿಂದ ವರದಿ ಈಚೆಗೆ ಬಂದಮೇಲೆ ಯಾವ ರೀತಿ ಅವರ ಬಗ್ಗೆ ಮಹಾರಾಷ್ಟ್ರದವರು ಮಾತನಾಡಿದ್ದಾರೆ, ಎಂಬುದು ಗೊತ್ತಿದೆ. ಮೈಸೂರಿನವರ ಉದಾರತನ ಮಹಾರಾಷ್ಟ್ರದವರ ಅವಹೇಳನ, ಮಹಾಜನ್ ಅವರು ಈಗ ಇದ್ದಿದ್ದರೆ ಅವರಿಗೆ ಚೆನ್ನಾಗಿ ಗೊತ್ತಾಗುತ್ತಿತ್ತು ಎಂಬುದಾಗಿ ನಾನು ಹೇಳಬಯಸುತ್ತೇನೆ. ದುರ್ದೈವದಿಂದ ಅವರು ಇಂದು ನಮ್ಮ ಎದುರಿಗೆ ಇಲ್ಲ. ಅವರ ಒಂದು ನಿಷ್ಪಕ್ಷಪಾತ ದೃಷ್ಟಿ, ಅವರು ಅನುಸರಿಸಿರುವ ನೀತಿನಿಯಮಗಳನ್ನು ನೋಡಿ ಯಾವ ನಾಡ ಪ್ರಯಾಣಿಕನೂ ತಲೆಬಾಗಬಹುದು. ಆದರೆ ನಿಜವಾಗಿ ಮೈಸೂರಿಗೆ ಆಗುವಂಥಾದ್ದು ನ್ಯಾಯವಾಗಿ ಆಗಿಲ್ಲ. ನಮ್ಮ ನ್ಯಾಯವಾದ ಬೇಡಿಕೆಗಳು ನಮಗೆ ಬರಲಿಲ್ಲ. ಮೈಸೂರಿಗೆ ಬರಬೇಕಾದಂಥ ಅನೇಕ ಸ್ಥಳಗಳು ಕಳೆದು ಹೋಗಿವೆ. ನಿಪ್ಪಾಣಿ—ಕಿತ್ತೂರು ನಡುವೆ ಇರತಕ್ಕ ಮಧ್ಯ ಪ್ರದೇಶಗಳನ್ನೂ ನಾವು ಕಳೆದುಕೊಂಡಿದ್ದೇವೆ. ನಾವು ಬೆಳಗಾಂಗೆ ಹೋಗಿ ಕೂಡಬೇಕಾದರೆ ನಡುವೆ ಇರತಕ್ಕ ಲೋಂಡಾ ಹಾಗೂ ಸೊಲ್ಲಾಪುರ ನಾಡು ನಮಗೆ ಬೇಕು ಎಂಬುದಾಗಿ ಬಾಯಿನಿಂದ ಹೇಳಬೇಕಾಗಿಲ್ಲ. ಅದಕ್ಕೆ ನಿಜವಾಗಿ ಮಹಾರಾಷ್ಟ್ರದವರು ಕಾಡಬಹುದು. ಅಲ್ಲಿನ ಕೆಲವು ಹಳ್ಳಿಗಳನ್ನು ನಮಗೆ ಕೊಟ್ಟಿದ್ದರೂ ಬರಬೇಕಾಗಿದ್ದ ಮುಖ್ಯವಾದ ಹಳ್ಳಿಗಳು ನಮಗೆ ಬಂದಿಲ್ಲ. ಇದನ್ನು ನೋಡಿದರೆ ಮಹಾಜನ್ ಅವರನ್ನು ನಿಜವಾಗಿ ಪಕ್ಷಪಾತಿ ಎಂದೇ ಕರೆಯಬೇಕಾಗಿದೆ. ಆ ವರದಿಯನ್ನು ಇಡೀ ವಿಚಾರ ಮಾಡಿದಾಗ್ಗೆ ಏನೇನು ತಪ್ಪು ಇದೆಯೆಂಬುದು ಚೆನ್ನಾಗಿ ಗೊತ್ತಾಗುತ್ತದೆ. ಅಂತಹ ದೊಡ್ಡ ಮನುಷ್ಯ ತಮಗೆ ತಿಳಿದ ರೀತಿಯಲ್ಲಿ ಅದಕ್ಕೆ ಪೂರ್ಣವಿರಾಮ ಕೊಟ್ಟಿದ್ದಾರೆ. ಈ ಕದನವನ್ನು ಮುಂದುವರಿಸಿದರೆ ರಾಷ್ಟ್ರಕ್ಕೆ, ದೇಶಕ್ಕೆ, ಹಾಗೂ ರಾಜ್ಯಕ್ಕೆ ಒಂದು ಗಂಡಾಂತರವಾಗುತ್ತದೆ. ಇದನ್ನು ಮುಗಿಸೋಣವೆಂದು ಹೇಳಿದ್ದಾರೆ. ಅದರಿಂದ ಅವರು ಒಂದು ನೀತಿಯನ್ನು ಅನುಸರಿಸಿ ಶಿಫಾರಸುಮಾಡಿರುವ ಪ್ರಕಾರ ಇಂದು ನಾವು ಅದನ್ನು ಗಮನಕ್ಕೆ ತೆಗೆದುಕೊಂಡರೆ ಆ ವರದಿಯನ್ನು ಒಪ್ಪಬೇಕು ಎನ್ನುವ ಭಾವನೆ ಬರುತ್ತದೆ. ಆದರೂ ಆ ವರದಿಯನ್ನು ನಾವು ವಿಚಾರಮಾಡೋಣ. ಇದಕ್ಕೆ ಯಾರು ಹೊಣೆ? ಮಹಾಜನ್ ಕಮೀಷನ್ ಅವರನ್ನು ನೇಮಿಸುವುದಕ್ಕೆ ಹಾಗೂ ಅವರ ಎದುರಿಗೆ ಸಾಕ್ಷಿ ಪುರಾವೆಗಳನ್ನು ಇರಿಸುವುದಕ್ಕೆ ಹೊಣೆ ಯಾರು? ಅವರ ಈ ವಾದಗಳನ್ನು ರಕ್ಷಿಸುವುದಕ್ಕೆ ಈಗ ಜವಾಬ್ದಾರರು ಯಾರು ಎಂಬುದನ್ನು ವಿಚಾರಮಾಡಬೇಕು. ಕೇಂದ್ರ ಸರ್ಕಾರದಲ್ಲಿ ಇರುವಂಥಾದ್ದು ಕಾಂಗ್ರೆಸ್ ರಾಜ್ಯ, ಮೈಸೂರಿನಲ್ಲಿ ಕಾಂಗ್ರೆಸ್ ರಾಜ್ಯ, ಮಹಾರಾಷ್ಟ್ರದಲ್ಲಿಯೂ ಕಾಂಗ್ರೆಸ್ ರಾಜ್ಯ ಇದೆ. ಅನೇಕ ಹಿರಿಯರು ಹಾಗೂ ಹಿರಿಯ ಸ್ನೇಹಿತರು ರಾಜಕೀಯ ರಂಗದಲ್ಲಿ ವಿರೋಧ ಪಕ್ಷಕ್ಕಾಗಲೀ, ಕಾಂಗ್ರೆಸ್ ಪಕ್ಷಕ್ಕಾಗಲೀ ಪಕ್ಷ ಭೇದಭಾವನೆ ಇದ್ದೇ ಇರುತ್ತದೆಂದು ಹೇಳಿದ್ದಾರೆ. ಪಕ್ಷಕ್ಕಿಂತ ರಾಜ್ಯ ಹಿತ ಹೆಚ್ಚು. ರಾಜ್ಯಕ್ಕಿಂತ, ರಾಷ್ಟ್ರ ಹಿತ ಹೆಚ್ಚು. ನಾವು ಮೊದಲು ಭಾರತೀಯರು, ನಂತರ ಮೈಸೂರಿನವರು, ಆಮೇಲೆ ಪಕ್ಷದ ಜನರು. ನಮಗೆ ಆತ್ಮ ವಿಶ್ವಾಸವಿದೆ. ಮೈಸೂರಿನಲ್ಲಿ ಯಾವುದೇ ವಿರೋಧಪಕ್ಷವಾಗಲೀ ಇಂದು ಮೈಸೂರಿನ ಹಿತವನ್ನು ತುಳಿಯುವುದಕ್ಕೆ ಮುಂದುವರಿಯುವುದಿಲ್ಲವೆಂದು ನಾನು ಅನೇಕ ಸಾರಿ ನನ್ನ ಹಿರಿಯ ಸ್ನೇಹಿತರಲ್ಲಿ ಹೇಳುತ್ತಲೇ ಇದ್ದೇನೆ. ಆದರೆ ಮಹಾರಾಷ್ಟ್ರ ಮುಖಂಡರೂ, ಕೇಂದ್ರಸರ್ಕಾರದ ಮುಖಂಡರೂ ಹಾಗೂ ಮೈಸೂರಿನ ಮುಖಂಡರೂ ವರ್ಕಿಂಗ್ ಕಮಿಟಿ ಕೂಡಿದಾಗ ವಿರೋಧಪಕ್ಷದವರನ್ನು ಈ ವಿಚಾರವಾಗಿ ಏನೂ ಕೇಳಲಿಲ್ಲ. ಒಳಗೇ ಕೂತು ಕಿವಿಮಾತುಗಳನ್ನಾಡಿ ಮರಾಠಿ ಸ್ನೇಹಿತರು ಹೇಳಿದಂತೆ ಚುನಾವಣೆ ರಂಗದಲ್ಲಿ ನಾಟಕವಾಡಿದ ಹಾಗೆ ಏನೂ ಗೊತ್ತಿಲ್ಲದವರ ಹಾಗೆ ಏನೋ ಸಂಶಯಪಟ್ಟಂತೆ ಮಹಾಜನ್ ಕಮಿಷನ್ನಿನವರ ನೇಮಕ ಒಪ್ಪುವುದಿಲ್ಲವೆಂದು ನಾಟಕಮಾಡಿದರು. ಎಸ್. ಆರ್. ಸಿ. ಕಮಿಷನ್ ಪೂರ್ತಿಗೊಳಿಸಿದಮೇಲೆ ಈ ವಿವಾದವನ್ನು ಎತ್ತಬೇಡಿ, ಏನಾದರೂ ಅಲ್ಪ ಸ್ವಲ್ಪ ವಿಷಯಗಳು ತೀರ್ಮಾನವಾಗದೆ ಉಳಿದಿದ್ದರೆ ನಿಮ್ಮನಿಮ್ಮಲ್ಲೇ ಆ ವಾದ ವಿವಾದಗಳನ್ನು ಬಗೆಹರಿಸಬೇಕು ಎಂದೂ, ಅದನ್ನು ಪುನಃ ಪಂಚಾಯತಿಗೆ ತರಬೇಡಿ ಎಂಬುದಾಗಿ ನಿರ್ಣಯವಾಗಿದ್ದರೂ ಸಹ ಮತ್ತೊಮ್ಮೆ ಮಹಾಜನ್ ಅವರ ಕಮಿಷನ್ನನ್ನು ನೇಮಿಸಿದ್ದಾರೆ. ರಾಜ್ಯಗಳಲ್ಲಿ ವಿರೋಧಪಕ್ಷಗಳ ನ್ಯಾಯವಾದ ಬೇಡಿಕೆಗಳು ಯಾವುವು ಇವೆಯೋ ಅವನ್ನು ಒಪ್ಪೋಣವೆಂದು ನಮ್ಮ ನಾಯಕರು ಏಕೆ ಉತ್ತರ ಕೊಡುವುದಕ್ಕಾಗುವುದಿಲ್ಲ? ಅದನ್ನು ಬಿಟ್ಟು ಏನೇನೋ ಉತ್ತರ ಕೊಟ್ಟಿದ್ದಾರೆ. ಇವತ್ತು ಮಹಾಜನ್ ಕಮಿಷನ್ ಬೇಕು, ಎಂಬ ಬಗ್ಗೆ ಅಲ್ಲಿ ನಿರ್ಣಯವಾದುದು ಇದೆ. ಇದನ್ನು ಯಾರು ಬೇಕು ಎಂದು ಹೇಳುತ್ತಾರೋ ಅವರು ನಮಗೆ ಬರಬೇಕಾದ ಪ್ರಾಂತಗಳೆಲ್ಲಾ ಬರಲಿ ಎಂದು ಅವರ ನಾಯಕರು ಹೇಳಬಹುದಾಗಿತ್ತು. ಅದನ್ನು ಏಕೆ ಈಗ ಬಿಟ್ಟರು ಎಂದು ನಾನು ಪ್ರಶ್ನೆ ಮಾಡುತ್ತೇನೆ. ಅದಕ್ಕೆ ಉತ್ತರ ಹೇಳಲಿಲ್ಲ. ಮಾನ್ಯ ಶ್ರೀ ನಿಜಲಿಂಗಪ್ಪನವರು ಅಲ್ಲಿ ಆದುದನ್ನು

(ಶ್ರೀ ಕೆ. ಎಚ್. ಪಾಟೀಲ್)

ಖಚಿತವಾಗಿ ನಮಗಾಗಲೀ ಈ ಸಭೆಗಾಗಲೀ ಅಥವಾ ಇತರರಿಗಾಗಲೀ ತಿಳಿಸುವುದಿಲ್ಲ, ಆದರೆ ಇತರರನ್ನು ಹಳಿಯುವುದು ಬೇಡ. ಏಕೆಂದರೆ ಅಡಿಗೆ ಕೆಡಿಸಿದ್ದಾರೆ, ಕೆಡಿಸಿದಮೇಲೆ ಕೊಟ್ಟಿದ್ದು ಉಣ್ಣು ಎನ್ನುವ ಭಾವನೆ ವಿರೋಧಪಕ್ಷದವರಿಗೆ ಈಗ ಒದಗಿ ಬಂದಿದೆ. ಆ ವರದಿಯನ್ನು ಎಲ್ಲರೂ ಒಪ್ಪುತ್ತಾರೋ ಇಲ್ಲವೋ ನಮಗೆ ಆ ಬಡಿದಾಟ ಬೇಡಿ. ಇವತ್ತು ಮಹಾರಾಷ್ಟ್ರ ಹಾಗೂ ಮೈಸೂರು ಬೇರೆ ಬೇರೆಯಾಗಿದೆ. ನಾಳೆ ಒಟ್ಟಿಗೆ ಅವು ಕೂಡಿ ಇರುವ ಪ್ರಸಂಗ ಬಂದೀತು. ಭಾಷಾರಾಜ್ಯವೇ ಬೇಡವೆಂದು ಎಲ್ಲರೂ ಒಗ್ಗಟ್ಟಾಗಿ ಇರತಕ್ಕ ಪ್ರಸಂಗ ಬಂದೀತು. ಈ ದೃಷ್ಟಿಯಿಂದ ನಾನು ನೋಡುವುದಾದರೆ ಮಹಾಜನ್ ಅವರ ವರದಿ ನಮಗೆ ಹೃದಯಕ್ಕೆ ಸರಿಯಾಗಿ ಅಗದೇ ಇದ್ದರೂ, ನಮಗೆ ಅನ್ಯಾಯ ಮಾಡಿದ್ದರೂ ಈಗ ನಾವು ಒಪ್ಪಬೇಕಾಗಿದೆ. ಇವತ್ತಿನ ದಿವಸ ಮಹಾಜನ್ ಅವರು ಕೊಟ್ಟ ವರದಿ ಪ್ರಕಾರ ಕನ್ನಡ ಮಾತನಾಡತಕ್ಕ 516 ಹಳ್ಳಿಗಳ ಪೈಕಿ 260 ಹಳ್ಳಿಗಳನ್ನು ಮಾತ್ರ ಮೈಸೂರಿನವರು ಮಹಾರಾಷ್ಟ್ರದಿಂದ ಕ್ಲೇಮ್ ಮಾಡಿದಮೇಲೆ ಮಹಾರಾಷ್ಟ್ರದವರು ಅಷ್ಟನ್ನು ಕೊಡಲಿಕ್ಕೆ ಒಪ್ಪಿದರು. ಆ 260 ಹಳ್ಳಿಗಳಲ್ಲಿ ಕೆಲವು ನಮ್ಮದು ಎಂದು ಅವರು ವಾದಿಸಿದ ಮೇಲೆ ಕೇವಲ 247 ಹಳ್ಳಿಗಳನ್ನು ಮಹಾಜನ್ ಅವರು ನಮಗೆ ಕೊಡಿಸಿದ್ದಾರೆ. ಮೈಸೂರಿನವರು ಕನ್ನಡ ಮಾತನಾಡತಕ್ಕ ಒಂದು ಹಳ್ಳಿಯನ್ನೂ ಸಹ ಅವರಿಗೆ ಕೊಡುತ್ತೇವೆಂದು ಏನೂ ಹೇಳಲಿಲ್ಲ. ಮಹಾರಾಷ್ಟ್ರದವರು 814 ಹಳ್ಳಿಗಳ ಪೈಕಿ 513 ಹಳ್ಳಿಗಳನ್ನು ಮಾತ್ರ ಪಡೆದಿದ್ದಾರೆ. ಇದರಿಂದ ನಮಗೆ ಆದ ಲಾಭವೇನು? ನಾವು ಕೇಳಿದಂಥ ಹಳ್ಳಿಗಳು ನಮಗೆ ಸಿಗಲಿಲ್ಲ. ಅವರು ಯಾವುದನ್ನೂ ಕೊಡಲಿಕ್ಕೆ ಒಪ್ಪಲಿಲ್ಲ. ಅದರಿಂದಾಗಿ ಮಹಾರಾಷ್ಟ್ರದವರಿಗೆ ಲಾಭವಿದೆಯೋ ಅಥವಾ ಮೈಸೂರಿನವರಿಗೆ ಲಾಭವಿದೆಯೋ ಗೊತ್ತಿಲ್ಲ. ನಮ್ಮ ನಾಯಕರು ಅಲ್ಲಿ ಹೋಗಿ ಏನು ಹೇಳಿದರೋ ಅದೂ ಕೂಡ ಗೊತ್ತಿಲ್ಲ. ಅಷ್ಟಾಗಿ ಅವರಿಗೆ ಉಪಕಾರ ಕೊಟ್ಟರು. ನಮಗೆ ಇದರಿಂದ ತೊಂದರೆಯೇ ಹೊರ್ತು ಅಷ್ಟೇನೂ ಲಾಭವಾಗಿಲ್ಲ. ಬೆಳಗಾಂ ನಮಗೆ ನ್ಯಾಯವಾಗಿ ಬರುವುದೇನೋ ಸರಿ. ನಮ್ಮ ನಾಯಕರು ಇದರಲ್ಲಿ ಏನೋ ತಪ್ಪು ಮಾಡಿರುವರೆಂದು ನನಗೆ ತೋಚುತ್ತದೆ. ರಾಜ್ಯದ ಹಿತದೃಷ್ಟಿಯಿಂದ ಮಹಾಜನ್ ಅವರ ವರದಿಗೆ ಇವರು ಸಹಿ ಮಾಡಿದ್ದು ಈಗ ನಮ್ಮ ನಾಯಕರಿಗೆ ಒಂದು ದೊಡ್ಡ ಸಮಸ್ಯೆಯಾಗಿದೆ.

ಮೈಸೂರು ರಾಜ್ಯದ ವಿರೋಧಪಕ್ಷದವರು ಈ ವಿಷಯದಲ್ಲಿ ವಿಶಾಲ ಹೃದಯವನ್ನ ತಾಳಿ ಅದನ್ನೆಲ್ಲಾ ತೀರ್ಮಾನ ಮಾಡಿದ್ದಾರೆ. ಯಾರು ಬಹು ಸಂಖ್ಯಾತರಿದ್ದಾರೆ, ಯಾರು ಅಲ್ಪ ಸಂಖ್ಯಾತರಿದ್ದಾರೆ ಎಂದು ಯೋಚಿಸುವ ಭಾವನೆ ನಮ್ಮನ್ನು ಹಾಳು ಮಾಡಿದೆ. ಮೊನ್ನೆ ಪಾರ್ಲಿಮೆಂಟ್‌ನಲ್ಲಿ ಗೃಹ ಶಾಖೆಯ ಸಚಿವರು ಏನು ಹೇಳಿದ್ದಾರೆ ಎಂಬುದು ಎಲ್ಲರಿಗೂ ಗೊತ್ತಿದೆ. ಈ ಕಾಂಗ್ರೆಸ್‌ನವರು ಈ ಮಹಾಜನ್ ಕಮಿಷನ್ನಿನ ವರದಿಯ ಬಗ್ಗೆ ಒಂದು ಕಡೆ ಒಂದು ಮಾತು ಹೇಳುವುದು, ಇನ್ನೊಂದು ಕಡೆ ಚಳುವಳಿಯನ್ನು ಎಬ್ಬಿಸುವುದು ಹೀಗೆ ಮಾಡಿ ದೇಶದಲ್ಲಿ ವೇಳೆ ಮತ್ತು ಹಣವನ್ನು ಹಾಳು ಮಾಡುವುದಕ್ಕೆ ಹತ್ತಿದ್ದಾರೆ. ಕಾಂಗ್ರೆಸ್ಸಿನವರದೇ ಆಡಳಿತ ಇರುವಾಗ ಇಷ್ಟು ಕೊಡುತ್ತೇವೆ, ಇಷ್ಟು ಬಿಡುತ್ತೇವೆಂದು ಒಂದೇ ಟೇಬಲ್ ಮೇಲೆ ತೀರ್ಮಾನ ತೆಗೆದುಕೊಳ್ಳುವುದು ಸೂಕ್ತವಲ್ಲ. ಇವೊತ್ತು ನ್ಯಾಯವಾಗಿ ಇಷ್ಟು ಪ್ರದೇಶಗಳನ್ನು ಮೈಸೂರಿಗೆ ಕೊಡದಿದ್ದರೆ ಮೈಸೂರಿನ ಮಂತ್ರಿ ಮಂಡಲ ಇರುವುದಿಲ್ಲ, ಮೊದಲು ರಾಜ್ಯದ ಹಿತ ಆಮೇಲೆ ನನ್ನ ಹಿತ ಎಂದು ಮೈಸೂರಿನ ಮಂತ್ರಿ ಮಂಡಲದವರು ಕೇಂದ್ರ ಸರ್ಕಾರದವರಿಗೆ ಹೇಳಿದ್ದರೆ ಅದಕ್ಕೆ ವಿರೋಧಪಕ್ಷದವರು ಸಂಪೂರ್ಣ ಸಹಕಾರ ಮಾಡುತ್ತಿದ್ದರು. ಇದಕ್ಕೆ ಇನ್ನೂ ಅಧಿಕ ಶಕ್ತಿ ಇರುವಂತೆ ಆಗುತ್ತಿತ್ತು ಎನ್ನುವ ಮಾತನ್ನು ನಾನು ಘಂಟಾಘೋಷವಾಗಿ ಹೇಳುತ್ತೇನೆ. ಮಹಾಜನ್ ಕಮಿಷನ್ನನ್ನು ನೇಮಕ ಮಾಡುವಾಗ ಅದನ್ನು ನಾವು ಬಹಳ ಕಟುವಾಗಿ ಪ್ರತಿಭಟನೆ ಮಾಡಿದ್ದೇವೆ. ಮಹಾರಾಷ್ಟ್ರದಲ್ಲಿ ವಿರೋಧಪಕ್ಷದವರು ಮತ್ತು ಕಾಂಗ್ರೆಸ್‌ನವರು ಎಲ್ಲರೂ ಒಂದಾಗಿ ಮಹಾರಾಷ್ಟ್ರದ ಹಿತದೃಷ್ಟಿಯಿಂದ ಮೊದಲು ಮಹಾಜನ್ ಕಮಿಷನ್ ಅನ್ನು ನೇಮಕ ಮಾಡಿದರು. ಕಾಂಗ್ರೆಸ್ಸಿವರು ಮಾತ್ರ ಆ ಕೆಲಸವನ್ನು ಮಾಡಲಿಲ್ಲ. ಅವರು ಬಹಳ ಎಚ್ಚರಿಕೆಯಿಂದ ನಡೆದುಕೊಂಡಿದ್ದಾರೆ. ನಾವು ಆಗ ಇಡೀ ಕರ್ನಾಟಕದವರೇ ಏಕ ಸದಸ್ಯ ಆಯೋಗಕ್ಕೆ ಬಹಿಷ್ಕಾರ ಹಾಕಬೇಕೆಂದು ಹೇಳಿದಾಗ ಇಲ್ಲಿ ನಮ್ಮವರು ಕೇಳುವುದಿಲ್ಲ ಎಂದು ಹೇಳಿದರು. ಆ ಕಡೆ ಕುಳಿತು ಕೊಂಡಿರತಕ್ಕ ನಮ್ಮ ಕಾಂಗ್ರೆಸ್ ಮಿತ್ರರು ನಮ್ಮ ವಾದವನ್ನು ಕೇಳಲಿಲ್ಲ. ಕೊನೆಗೆ ಆದದ್ದು ಏನು ಎಂದರೆ ಶ್ರೀಮಾನ್ ನಿಜಲಿಂಗಪ್ಪನವರ ವೀಕ್ ಲೀಡರ್‌ಷಿಪ್ಪಿನಿಂದ ಏಕಸದಸ್ಯ ಆಯೋಗವನ್ನು ನೇಮಿಸುವುದಕ್ಕೆ ಅವರು ಒಪ್ಪಿದರು. ಅದಕ್ಕೆ ಮಹಾಜನ್ ಅವರ ಹೆಸರು ಬಂತು. ಮಹಾಜನ್ ಅವರು ಸುಪ್ರೀಮ್ ಕೋರ್ಟ್ ಜಡ್ಜಿಗಳಾಗಿದ್ದವರು ಅವರು ನಿಷ್ಪಕ್ಷಪಾತವಾಗಿ ಈ ಒಂದು ಸಮಸ್ಯೆಯನ್ನು ಬಗೆಹರಿಸುತ್ತಾರೆ ಎನ್ನುವ ಒಂದು ಅಭಿಪ್ರಾಯ ಕೂಡ ಆಗ ಬಂತು. ಇವೊತ್ತಿನ ದಿವಸ ಮಹಾಜನ್ ಅವರು ಏನು ವರದಿಯನ್ನು ಕೊಟ್ಟಿದ್ದಾರೆಯೋ

ಅದನ್ನು ನೋಡಿದರೆ ಮಹಾರಾಷ್ಟ್ರದವರಾಗಲೀ, ಮೈಸೂರಿನವರಾಗಲೀ ಅಥವಾ ಕಾಸರಗೋಡಿನವರಾಗಲೀ ಯಾರೂ ಇದನ್ನು ಅಲ್ಲಗಳೆಯುವುದಕ್ಕಾಗುವುದಿಲ್ಲ ಎಂದು ಸರ್ಕಾರದವರೇ ತಮ್ಮ ಬಾಯಲ್ಲಿ ಹೇಳುತ್ತಿದ್ದಾರೆ. ಕಾಸರಗೋಡು ನ್ಯಾಯವಾಗಿ ಮೈಸೂರಿಗೆ ಸೇರಬೇಕು ಎಂದು ಕೇರಳದ ಮುಖ್ಯಮಂತ್ರಿಗಳಾಗಿರುವ ಶ್ರೀ ನಂಬೂದ್ರಿಪಾಡ್ ಅವರೇ ಹಿಂದೆ ಹೇಳಿದ್ದಾರೆ. ಕೇರಳದವರನ್ನು ಕಾಂಗ್ರೆಸ್ಸಿನವರು ಕೇಳದೆಯೇ ಏಕಸದಸ್ಯ ಆಯೋಗವನ್ನು ನೇಮಕ ಮಾಡಿದರು ಎನ್ನುವಂತಹ ತಾತ್ವಿಕವಾದ ದೃಷ್ಟಿಯಿಂದ ಅವರು ಮಾತನಾಡುತ್ತಿದ್ದಾರೆಯೇ ಹೊರತು ಕಾಸರಗೋಡಿನ ಬಗ್ಗೆ ನಂಬೂದ್ರಿಪಾಡ್ ಅವರಿಗೆ ಎರಡು ನಾಲಿಗೆ ಇಲ್ಲ. ಮತ್ತು ಅವರಿಗೆ ಕಾಸರಗೋಡಿನ ಬಗ್ಗೆ ಎರಡು ಅಭಿಪ್ರಾಯ ಬರುವುದಕ್ಕೆ ಸಾಧ್ಯವಿಲ್ಲ. ಕಾಸರಗೋಡಿನವರು ನಿರ್ಬಂಧಕ್ಕೋಸ್ಕರ ಮೈಸೂರಿಗೆ ಸೇರಿದರು ಎಂದು ಶ್ರೀಮಾನ್ ಕದಂ ಅವರು ಏನು ಹೇಳಿದರೋ ಅದು ಸರಿಯಲ್ಲ. ಬೆಳಗಾವಿ ಮತ್ತು ಕಾರವಾರಗಳು ಮಹಾರಾಷ್ಟ್ರಕ್ಕೆ ಸೇರಬೇಕೆಂದು ಮಹಾಜನ್ ಅವರು ತಪ್ಪು ಬರೆದಿದ್ದರೆ ಇದುವರೆಗೆ ಎಂದೋ ಮಹಾಜನ್ ವರದಿ ಕೇಂದ್ರದಲ್ಲಿ ಸ್ವೀಕಾರವಾಗಿ ಕಾರ್ಯಗತವಾಗುತ್ತಿತ್ತು. ಆದರೆ ದುರ್ದೈವ ವಶಾತ್ ಅದು ಆಗಲಿಲ್ಲ. ಆ ಪ್ರದೇಶಗಳು ನ್ಯಾಯವಾಗಿ ಮೈಸೂರಿಗೇ ಸೇರಬೇಕೆಂದು ಮಹಾಜನ್ ಅವರು ತಮ್ಮ ವರದಿಯಲ್ಲಿ ಸಿಫಾರಸ್ಸು ಮಾಡಿದ್ದಾರೆ. ಆದರೂ ಸಹ ನಮಗೆ ಇನ್ನೂ ನ್ಯಾಯವಾಗಿ ಬರಬೇಕಾಗಿದ್ದ ಅನೇಕ ಪ್ರದೇಶಗಳು ಮಹಾರಾಷ್ಟ್ರಕ್ಕೆ ಹೋಗಲಿವೆ. ಕೊಂಕಣಿ ಭಾಷೆಯ ವಿಚಾರವಾಗಿ ಕೆಲವು ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಕೊಂಕಣಿ ಭಾಷೆಗೆ ಸಂಬಂಧಪಟ್ಟಹಾಗೆ ಕೆಲವು ವಿಚಾರಗಳನ್ನು ಮಹಾಜನ್ ಅವರು ತಮ್ಮ ವರದಿಯಲ್ಲ ಹೇಳಿದ್ದಾರೆ. ಈ ವರದಿಯನ್ನು ಶ್ರೀಮಾನ್ ಕದಂ ಅವರು ಸಂಪೂರ್ಣವಾಗಿ ನೋಡಿದ್ದರೆ, ಈ ವರದಿಯ ಹಿನ್ನಲೆಯನ್ನು ಪರಿಶೀಲನೆ ಮಾಡಿದ್ದರೆ ಅವರಿಗೆ ಗೊತ್ತಾಗುತ್ತಿತ್ತು. ಕೊಂಕಣಿ ಭಾಷೆ ನಿಜವಾಗಿ ಸ್ವತಂತ್ರ ಭಾಷೆ ಅದು ಯಾವುದೇ ಭಾಷೆಗೆ ಹೊಂದಿಕೊಂಡಿಲ್ಲ ಎನ್ನುವ ಮಾತನ್ನು ಅವರು ಆಧಾರಯುತವಾಗಿ ಹೇಳಿದ್ದಾರೆ. ಮತ್ತು ಕೊಂಕಣಿಯನ್ನು ಮಾತನಾಡುವ ಜನ ಬಹುಭಾಗ ಕನ್ನಡ ನಾಡಿನಲ್ಲಿಯೇ ಇದ್ದಾರೆ. ಆದ್ದರಿಂದ ಕೊಂಕಣಿ ಭಾಷೆ ಮರಾಠಿಯ ಉಪಭಾಷೆ ಅಲ್ಲ ಎಂಬುದು ಈ ವರದಿಯನ್ನೇ ನೋಡಿದರೆ ಅವರಿಗೆ ಗೊತ್ತಾಗುತ್ತದೆ.

5-30 P.M.

ಕೆಲವರು ಈ ವರದಿಯನ್ನು ಅವಾರ್ಡ್ ಎಂದು ಹೇಳಿದ್ದಾರೆ. ಆದರೆ ಕಾಯಿದೆ ದೃಷ್ಟಿಯಿಂದ ಇದು ಅವಾರ್ಡ್ ಆಗುವುದಿಲ್ಲ. ಇದು ಪಾರ್ಲಿಮೆಂಟಿನ ಮುಂದೆ ಬಂದು ಅಲ್ಲಿ ಇದು ಪಾಸಾಗಬೇಕು. ಈ ವರದಿಯಲ್ಲಿ ನಮಗೆ ಅನುಕೂಲ ಇದೆ, ಅದಕ್ಕೋಸ್ಕರ ಮೈಸೂರಿನವರು ಒಪ್ಪಿದ್ದಾರೆ, ಇಲ್ಲದಿದ್ದರೆ ತಿರಸ್ಕಾರ ಮಾಡುತ್ತಿದ್ದರು ಎನ್ನುವ ಮನೋಭಾವನೆ ಅವರಿಗೆ ಬರುತ್ತದೆ. ಆದ್ದರಿಂದ ನಾವು ಇದನ್ನು ಈ ದೃಷ್ಟಿಯಿಂದ ನೋಡಬಾರದು. ಗಡೀ ಪ್ರದೇಶದಲ್ಲಿ ನ್ಯಾಯವಾಗಿ ಇನ್ನೂ ಕೆಲವು ಪ್ರದೇಶಗಳು ನಮ್ಮ ಮೈಸೂರಿಗೆ ಸೇರಬೇಕಾಗಿತ್ತು. ಹಾಗೆ ನೋಡಿದರೆ ನಾವು ಇದನ್ನು ಟೀಕಿಸಬೇಕು. ಆದರೆ ನಾವು ಇವೊತ್ತು ಮಹಾಜನ್ ಅವರ ಪ್ರಾಮಾಣಿಕತೆಯನ್ನು ಪ್ರಶ್ನಿಸಬಾರದು. ನಾವು ಇದನ್ನು ಒಪ್ಪಿದರೆ ಏತಕ್ಕೋಸ್ಕರ ಒಪ್ಪುತ್ತೇವೆ ಎಂದರೆ, ಆಯೋಗದ ನೇಮಕಕ್ಕೆ ಮೈಸೂರಿನವರು ಒಪ್ಪಿದುದೇ ತಪ್ಪು. ಇನ್ನು ಮುಂದಾದರೂ ರಾಜ್ಯದ ಹಿತದೃಷ್ಟಿಯಿಂದ ಕೇಂದ್ರದ ಒತ್ತಾಯಕ್ಕೆ ಮಣಿಯುವುದು ಬೇಡಿ. ಆ ರೀತಿ ಮಾಡುವುದಾದರೆ ಮೈಸೂರು ರಾಜ್ಯ ಹಾಳಾದೀತು. ಆದ್ದರಿಂದ ಯಾವ ಹೆದರಿಕೆ ಬೆದರಿಕೆಗಾಗಲಿ ಈ ವರದಿಯನ್ನು ತೀರ್ಪೆಂದು ಪರಿಗಣಿಸುವ ಈಗಿನ ಮೈಸೂರಿನ ನಿಲುವಿನಲ್ಲಿ ಬದಲಾವಣೆ ಆದರೆ ಪರಿಣಾಮ ಹಿತಕಾರಿಯಾಗಲಾರದು, ಎಂದು ನಾನು ಹೇಳಬಯಸುತ್ತೇನೆ. ಕೇಂದ್ರ ಸರ್ಕಾರದ ಗೃಹಮಂತ್ರಿಗಳಾದ ಶ್ರೀ ಚವಾಣ್ ಅವರು ಮತ್ತು ಶ್ರೀ ಶುಕ್ಲಾ ಅವರು ಪಾರ್ಲಿಮೆಂಟ್‌ನಲ್ಲಿ ಅಪಬದ್ಧವಾದ ಮಾತುಗಳನ್ನು ಹೇಳಿರುವುದು ಯೋಗ್ಯವಾಗಿ ಕಾಣುವುದಿಲ್ಲ. ಯಾವುದು ಕಾನೂನಿಗೆ ಮತ್ತು ಕಾಯದೆಗೆ ಸಂಬಂಧಪಡುವುದಿಲ್ಲವೋ ಅಂಥ ಮಾತನ್ನು ಇವರುಗಳು ಹೇಳಿದ್ದಾರೆ. ಇದರಿಂದ ಎರಡು ರಾಜ್ಯಗಳ ಜನರಲ್ಲಿ ವಿರುದ್ಧ ಭಾವನೆ ಬರುವುದಕ್ಕೆ ಅವಕಾಶವಾಗುತ್ತದೆ. ಮಹಾರಾಷ್ಟ್ರದವರಿಗೆ ಮತ್ತು ಕೇಂದ್ರದ ನಾಯಕರುಗಳಿಗೆ ಎಚ್ಚರಿಕೆ ಕೊಡಲಿಕ್ಕೆ ಬಯಸುತ್ತೇನೆ, ಏನೆಂದರೆ ನಾವೇನು ಹೇಡಿಗಳು ಅಲ್ಲ, ಸಮಯ ಬಂದರೆ ನಾವು ಸಹ ಹೋರಾಟ ಮಾಡಲು ತಯಾರಿದ್ದೇವೆ. ಒಮ್ಮೆ ಕೆರಳಿದರೆ ಸುಮ್ಮನೆ ಇರುವುದಕ್ಕೆ ನಮಗೆ ಸಾಧ್ಯವಿಲ್ಲ. ಯಾವುದೇ ರೀತಿಯಿಂದ ನಾವು ಶಿವಸೇನೆ ಮಾಡಿದಂತೆ ಕೆಡುಕು ಮಾಡುವುದಿಲ್ಲ. ನಾವು ಸ್ನೇಹಪ್ರಿಯರು, ಶಾಂತಿಪ್ರಿಯರು, ಆದರೆ ನಮಗೆ ಕೆಡಕು ಮಾಡುವವರನ್ನು ಸುಮ್ಮನೆ ಬಿಡುವುದಿಲ್ಲ. ಈ ಮಹಾಜನ್ ವರದಿಯನ್ನು ಪಕ್ಷಭೇದ ಮಾಡದೆ ಎಲ್ಲರೂ ಒಪ್ಪಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಡಿ. ಎಸ್. ಗೌಡ (ದೇವನಹಳ್ಳಿ).—ಮಾನ್ಯ ಸಭಾಪತಿಗಳೇ, ಇಂದು ಈ ಮಹಾಸಭೆಯ ಮುಂದೆ ಇರತಕ್ಕಂಥ ಮಹಾಜನ್ ವರದಿಯನ್ನು ಇಡೀ ಭಾರತದೇಶದ ಐಕ್ಯತೆಯ ದೃಷ್ಟಿಯಿಂದ ಮೈಸೂರಿನವರು ಮತ್ತು ಮಹಾರಾಷ್ಟ್ರದವರು ನೋಡಬೇಕಾಗಿದೆಯೆಂದು ನಾನು ಹೇಳುತ್ತೇನೆ. ಐಕ್ಯತೆಯ ದೃಷ್ಟಿಯಿಂದ ಭಾರತ ದೇಶ ಉಳಿದರೆ ಮಾತ್ರ ನಂತರ ಮೈಸೂರು ರಾಜ್ಯ, ಕೇರಳ ರಾಜ್ಯ, ಮದ್ರಾಸ್ ರಾಜ್ಯ, ಮಹಾರಾಷ್ಟ್ರ ರಾಜ್ಯ, ಆಂಧ್ರ ರಾಜ್ಯಗಳು ಇರುತ್ತವೆ. ಭಾರತದ ಐಕ್ಯತೆಗೆ ಧಕ್ಕೆ ಬಂದರೆ ಬಹುಶಃ ಈ ರಾಜ್ಯಗಳಾಗಲೀ, ಈ ಭಾಷೆಗಳಾಗಲೀ, ಈ ಗಡಿ ಗೊಂದಲಗಳಾಗಲೀ ಯಾವುದೂ ಉಳಿಯುವುದಿಲ್ಲವೆಂದು ಹೇಳುತ್ತೇನೆ. ಸ್ವಾತಂತ್ರ್ಯ ಪೂರ್ವದಲ್ಲಿ ಭಾರತದ ಸ್ವಾತಂತ್ರ್ಯಕ್ಕೆ ಮಹಾನಾಯಕರುಗಳು ಬಹಳವಾಗಿ ಹೋರಾಟ ಮಾಡಿದರು. ಸ್ವಾತಂತ್ರ್ಯ ಬಂದಮೇಲೆ ಭಾರತದ ಐಕ್ಯತೆಗೆ ಮಹಾನಾಯಕರುಗಳು ಬೆಂಬಲ ಕೊಟ್ಟರು. ಇಡೀ ಭಾರತ ಯಾವ ಗಲಾಟೆಯೂ ಇಲ್ಲದೆ ಐಕ್ಯತೆಯಿಂದ ಮುಂದುವರೆಯುತ್ತದೆಂದು ಗತಿಸಿಹೋದ, ತ್ಯಾಗಮಾಡಿ ಹೋದ ಮಹಾನಾಯಕರುಗಳು ಮತ್ತು ಮಹಾತ್ಮರುಗಳು ಆಶಿಸಿದ್ದರು. ಆದರೆ ಇಂದು ನಮ್ಮ ಕಣ್ಣಿನ ಮುಂದೆ ಕಾಣುತ್ತಿರುವ ದೃಶ್ಯವನ್ನು ನೋಡಿದ್ದೇ ಆದರೆ, ಕೇವಲ ಭಾಷೆಗಾಗಿ, ಗಡಿಗಳಿಗಾಗಿ ನಮ್ಮ ನಮ್ಮಲ್ಲೇ ಕಚ್ಚಾಡುತ್ತಾ ಹೊರಟಿದ್ದೇವೆ. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದಮೇಲೆ, ಇಡೀ ದೇಶದ ಆಡಳಿತದ ಸುಗಮತೆಗಾಗಿ ಮಾತ್ರ ಭಾಷಾವಾರು ಪ್ರಾಂತ್ಯಗಳು ರಚನೆಯಾದುವು. ಅದೇ ರೀತಿ ಭೂಪಟದಲ್ಲಿ ನಕ್ಷೆಗಳು ತಯಾರಾದವು. ಆಡಳಿತದ ದೃಷ್ಟಿಯಿಂದ ಭಾಷಾವಾರು ಪ್ರಾಂತ್ಯಗಳು ರಚನೆಯಾದಮೇಲೂ ಸಹ ಮಹಾರಾಷ್ಟ್ರದವರು ಮೈಸೂರಿನಲ್ಲಿ, ಮೈಸೂರಿನವರು ಮಹಾರಾಷ್ಟ್ರದಲ್ಲಿ, ಮತ್ತು ಬೇರೆ ಬೇರೆ ಭಾಷೆ ಮಾತನಾಡುವ ಜನರು ಬೇರೆ ಬೇರೆ ಪ್ರಾಂತ್ಯಗಳಲ್ಲಿ ಅನೇಕ ಕಾರಣಗಳಿಂದ ಹಂಚಿಹೋಗಿರಬಹುದು. ಇದನ್ನೆಲ್ಲಾ ಸರಿದೂಗಿಸಬೇಕಾದ ಪ್ರಮೇಯ ಇತ್ತೋ ಏನೋ ಎಂಬ ಭಾವನೆ ನಮ್ಮಲ್ಲಿ ಇತ್ತು. ಅದರಲ್ಲೂ ಮೈಸೂರು ಸರ್ಕಾರದವರು ನಮ್ಮ ಭಾಷೆ ಮಾತನಾಡುವ ಜನತೆಯ ದೃಷ್ಟಿಯಿಂದ ರಾಜ್ಯಾಂಗಬದ್ಧವಾಗಿ, ನ್ಯಾಯವಾಗಿ ಬೇರೆ ರಾಜ್ಯಗಳೊಡನೆ ವ್ಯವಹರಿಸುತ್ತಾ ಇದ್ದಂಥ ಸಮಯದಲ್ಲಿ ಚಳುವಳಿ ಮತ್ತು ಆಂದೋಳನಗಳು ಪ್ರಾರಂಭವಾದವು. ಈ ರೀತಿ ಪ್ರಾರಂಭವಾಗಿದ್ದು ಮೊದಲು ಮಹಾರಾಷ್ಟ್ರದಲ್ಲಿ. ಏಕಸದಸ್ಯ ಆಯೋಗಕ್ಕಾಗಿ ಒತ್ತಾಯ ಮಾಡಿದಂಥವರು ಮಹಾರಾಷ್ಟ್ರದವರೇ ಎಂಬುದು ಎಲ್ಲರಿಗೂ ತಿಳಿದೇ ಇದೆ. ಇಂತಹ ಸಂದರ್ಭದಲ್ಲಿ ಏಕಸದಸ್ಯ ಆಯೋಗಕ್ಕೆ ಮೈಸೂರಿನವರು ಒಪ್ಪಿದ್ದು ಭಾರತ ದೇಶದ ಹಿತದೃಷ್ಟಿಯಿಂದಲೇ ಹೊರತು ಮಹಾರಾಷ್ಟ್ರದವರಿಗೆ ಹೆದರಿ ಅಲ್ಲ. ಇನ್ನು ಮುಂದೆ ಆದರೂ ಸಹ ಗಡಿ ಸಮಸ್ಯೆಗಳು ಇರಬಾರದು, ಕೊನೆಯ ಬಾರಿಗೆ ತೀರ್ಮಾನವಾಗಲೀ ಎಂಬ ಏಕೈಕ ದೃಷ್ಟಿಯಿಂದ ಮೈಸೂರಿನ ಜನತೆ ಏಕಸದಸ್ಯ ಆಯೋಗಕ್ಕೆ ಒಪ್ಪಿಕೊಂಡರು. ಸಮಿತಿಯ ವರದಿ ಬಂದಮೇಲೆ ಮೈಸೂರಿನ ಜನರು ತಮಗೆ ಎಷ್ಟೇ ಅನ್ಯಾಯವಾಗಿದ್ದರೂ ಸಹ ದೇಶದ ಐಕ್ಯತೆಯ ದೃಷ್ಟಿಯಿಂದ ಸಂತೋಷದಿಂದ ಸ್ವಾಗತಿಸಿದರು. ಏಕಸದಸ್ಯ ಆಯೋಗವನ್ನು ರಚಿಸಬೇಕೆಂದು ಯಾರು ಚಳುವಳಿ ಮತ್ತು ಆಂದೋಳನಗಳನ್ನು ಮಾಡಿದರೋ ಅವರೇ ಇಂದು ವಿರೋಧ ಮಾಡುತ್ತಿದ್ದಾರೆ. ಏಕ ಸದಸ್ಯ ಆಯೋಗ ರಚನೆಯಾದಾಗ ಇಲ್ಲಿರುವ ನಮ್ಮ ಸ್ನೇಹಿತರಾದ ಮಹಾರಾಷ್ಟ್ರ ಏಕೀಕರಣ ಸಮಿತಿಯವರು ಸಹ ಸಂತೋಷ ವ್ಯಕ್ತಪಡಿಸಿದ್ದರು. ಆದರೆ ಇಂದು ಅವರೂ ಸಹ ವಿರೋಧಿಸುತ್ತಿದ್ದಾರೆ. ಇದು ಎಷ್ಟರಮಟ್ಟಿನ ವಿಚಿತ್ರ ಸಂಗತಿ ಎಂಬುದನ್ನು ಕೇಂದ್ರಸರ್ಕಾರದ ನಾಯಕರುಗಳು ಮತ್ತು ಮಹಾರಾಷ್ಟ್ರದ ನಾಯಕರುಗಳು ಅರಿತುಕೊಳ್ಳಬೇಕು.

ಮಹಾಜನ್ ವರದಿಯಿಂದ ಮೈಸೂರಿನವರಿಗೆ ಹೆಚ್ಚಿನ ಪ್ರಯೋಜನವಾಗಿದೆಯೋ ಅಥವಾ ಮಹಾರಾಷ್ಟ್ರದವರಿಗೆ ಹೆಚ್ಚಿನ ಪ್ರಯೋಜನವಾಗಿದೆಯೋ ಎಂಬುದು ಬೇರೆ ಪ್ರಶ್ನೆ. ಗಡಿ ಪ್ರದೇಶದಲ್ಲಿರುವ ಜನರ ಹಿತದೃಷ್ಟಿಯಿಂದ ಈ ವರದಿಯನ್ನು ಎರಡು ರಾಜ್ಯಗಳವರೂ ಒಪ್ಪಬೇಕಾಗಿದೆ. ವಿರೋಧಪಕ್ಷದ ಸದಸ್ಯರುಗಳು ಮಹಾರಾಷ್ಟ್ರದವರಿಗಿಂತ ಮೈಸೂರಿನವರಿಗೆ ಹೆಚ್ಚಿನ ಅನ್ಯಾಯವಾಗಿದೆಯೆಂದು ಹೇಳಿದರು. ಅಲ್ಲದೆ ಆಡಳಿತದ ದೃಷ್ಟಿಯಿಂದ ಮತ್ತು ಭಾಷಾ ದೃಷ್ಟಿಯಿಂದ ಮೈಸೂರು ರಾಜ್ಯಕ್ಕೆ ಹೊಂದಿಕೊಂಡಿರಬೇಕಾದಂಥ ಕೆಲವು ಪ್ರದೇಶಗಳು ಮಹಾರಾಷ್ಟ್ರದಲ್ಲಿ ಉಳಿದಿವೆಯೆಂದು ಸಹ ಅವರು ಹೇಳಿದರು. ಆದರೆ ಮೈಸೂರು ಸರ್ಕಾರದವರು ಇವತ್ತು ಏನು ಒಂದು ನಿಲುವನ್ನು ತಳೆದಿದ್ದಾರೆ, ಅದು ಕೇವಲ ಭಾರತ ದೇಶದ ಹಿತ ದೃಷ್ಟಿಯಿಂದಲೇ ಹೊರತು ಮೈಸೂರಿಗೆ ಅನ್ಯಾಯವಾಗಿದೆ ಅಥವಾ ಮಹಾರಾಷ್ಟ್ರಕ್ಕೆ ಅನ್ಯಾಯವಾಗಿದೆ ಎಂಬ ಯಾವ ದೃಷ್ಟಿಯಿಂದಲೂ ಅಲ್ಲ. ಈ ದಿಶೆಯಲ್ಲಿ ನಮ್ಮ ಮೈಸೂರು ಸರ್ಕಾರದವರು ಪರ್ಯಾಲೋಚಿಸಿ ಏನು ಒಂದು ತೀರ್ಮಾನ ತೆಗೆದುಕೊಂಡಿದ್ದಾರೆ, ಆ ಒಂದು ತೀರ್ಮಾನವನ್ನು ನಿಜಕ್ಕೂ ಎಲ್ಲರೂ ಸ್ವಾಗತಿಸಬೇಕಾಗಿದೆ. ಅಲ್ಲದೆ ಇದು ಸರ್ಕಾರದ ಒಂದು ಕೊನೆಯ ತೀರ್ಮಾನವೆಂದು ನಾನಾದರೂ ಸಹ ಭಾವಿಸುತ್ತೇನೆ ಹಿಂದೆ ಈ ಬಗ್ಗೆ ಅನೇಕ ಸಮಿತಿಗಳು ರಚನೆಯಾಗಿವೆ,

ಆದರೂ ಸಮಸ್ಯೆ ಬಗೆಹರಿಯದೆ ಮಹಾಜನ್ ಆಯೋಗ ರಚನೆಯಾಯಿತು. ಈ ಮಹಾಜನ್ ವರದಿಯನ್ನು ಭಾರತದ ಐಕ್ಯತೆಯ ದೃಷ್ಟಿಯಿಂದ, ಭಾರತದ ಪ್ರಗತಿಯ ದೃಷ್ಟಿಯಿಂದ ಎಲ್ಲರೂ ಒಪ್ಪಿಕೊಳ್ಳಬೇಕೆಂದು ನಾನಾದರೂ ಹೇಳಬಯಸುತ್ತೇನೆ. ಈ ವರದಿಯನ್ನು ಮಹಾರಾಷ್ಟ್ರದವರು ಆಗಲೀ ಅಥವಾ ಕೇರಳದವರಾಗಲೀ ಒಪ್ಪದಿದ್ದರೆ, ಭಾಷಾವಾರು ಪ್ರಾಂತ್ಯಗಳನ್ನು ರದ್ದುಗೊಳಿಸಿ, ಇಡೀ ಭಾರತವೇ ಒಂದು ಏಕೈಕ ರಾಜ್ಯವಾಗಿರುವಂತೆ ಮಾಡಲಿ. ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಎಂಬುದು ಹೋಗಲಿ. ಮೈಸೂರು ಹೋಗಲಿ, ಮಹಾರಾಷ್ಟ್ರ ಹೋಗಲಿ, ಕೇರಳ ಹೋಗಲಿ, ಮದ್ರಾಸ್ ಹೋಗಲಿ; ಮತ್ತು ಎಲ್ಲಾ ಪ್ರಾಂತ್ಯಗಳೂ ಹೋಗಿ ಭಾರತ ಮಾತ್ರ ಉಳಿಯಬೇಕು. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದಾಗ ಎಲ್ಲಾ ನಾಯಕರುಗಳು ಹೇಳುತ್ತಿದ್ದರು, ನಮ್ಮ ದೇಶವಲ್ಲಿ ದಾರಿದ್ರ್ಯ ಹೋಗಬೇಕು, ಎಲ್ಲಾ ಜನರಿಗೂ ಅನ್ನ ಬಟ್ಟೆಯನ್ನು ಒದಗಿಸಬೇಕೆಂದು. ಇಂದೂ ಸಹ ನಾವುಗಳು ಅದರಂತೆ ಶ್ರಮಿಸಬೇಕಾಗಿದೆ. ಅದು ಬಿಟ್ಟು ಬರೀ ಗಡಿ ಪ್ರಶ್ನೆ ಬಗ್ಗೆ ಹೋರಾಟ ಮಾಡುವುದು ಸರಿಯಲ್ಲ. ಯಾರು ಮಹಾಜನ್ ವರದಿ ಹೊರಬರಲಿ ಎಂದು ಆತುರ ಪಡುತ್ತಿದ್ದರೋ, ಅವರೇ ಇಂದು ಮತ್ತೆ ಹೋರಾಟಕ್ಕೆ ಪ್ರಾರಂಭ ಮಾಡಿದ್ದಾರೆ, ಅದು ಸರಿಯಲ್ಲ. ನಾನಾದರೂ ಹೇಳುತ್ತೇನೆ: ಮಹಾರಾಷ್ಟ್ರದ ನಾಯಕರಾಗಲೀ, ಮೈಸೂರಿನ ನಾಯಕರಾಗಲೀ, ಕಾಂಗ್ರೆಸ್ ಪಕ್ಷದವರೇ ಆಗಲೀ, ಅಥವಾ ವಿರೋಧಪಕ್ಷದವರೇ ಆಗಲೀ, ಎಲ್ಲರೂ ಸಹ ಇಡೀ ಭಾರತ ದೇಶದ ಪ್ರಗತಿಗೆ ದುಡಿಯಬೇಕೇ ಹೊರತು, ಒಂದು ಭಾಷೆ ಮಾತನಾಡುವ ಒಂದು ಹಳ್ಳಿ ಮತ್ತೊಂದು ಭಾಷೆ ಮಾತನಾಡುವ ರಾಜ್ಯದಲ್ಲಿ ಇದ್ದರೆ ಏನು ? ಇನ್ನು ಮುಂದಾದರೂ ಸಹ ಈ ಗಡಿ ಪ್ರಶ್ನೆಯನ್ನು ಮುಗಿಸಿ ಉಭಯ ಪಕ್ಷಗಳೂ ಸಹ ಮಹಾಜನ್ ವರದಿಯನ್ನು ಒಪ್ಪಿಕೊಳ್ಳಬೇಕೆಂದು ಹೇಳುತ್ತೇನೆ. ಮಹಾಜನ್ ಅವರು ಬಹಳ ದೊಡ್ಡ ವ್ಯಕ್ತಿ, ಸುಪ್ರೀಂ ಕೋರ್ಟಿನಲ್ಲಿ ಮುಖ್ಯ ನ್ಯಾಯಾಧೀಶರಾಗಿದ್ದವರು, ಅವರು ಇಡೀ ಭಾರತದ ಹಿತದೃಷ್ಟಿಯಿಂದ ಒಳ್ಳೆಯ ತೀರ್ಮಾನವನ್ನು ಕೊಟ್ಟಿದ್ದಾರೆ. ಇಂತಹವರು ಕೊಟ್ಟಿರುವ ವರದಿಗೆ ನಮ್ಮ ರಾಜ್ಯದವರು ಮತ್ತು ಮಹಾರಾಷ್ಟ್ರದವರು ಅಲ್ಲದೆ ಕೇಂದ್ರದ ನಾಯಕರುಗಳು ಒಪ್ಪಿಗೆ ಕೊಟ್ಟು ದೇಶದ ಜನತೆಗೆ ಒಂದು ಆದರ್ಶವನ್ನು, ನ್ಯಾಯ ಮಾರ್ಗವನ್ನು ತೋರಿಸಿ ಕೊಡಬೇಕು. ಕೇಂದ್ರಸರ್ಕಾರದವರು ಮೈಸೂರು ಮತ್ತು ಮಹಾರಾಷ್ಟ್ರದ ನಾಯಕರುಗಳನ್ನು ಒಲಿಸಿಕೊಂಡು ಮಹಾಜನ್ ವರದಿಯನ್ನು ಜಾರಿಗೆ ತರಬೇಕು. ಇದು ಕೇಂದ್ರಸರ್ಕಾರದವರ ಕರ್ತವ್ಯ. ಈಗಲಾದರೂ ನಾನು ಹೇಳಬಯಸುತ್ತೇನೆ, ಮಹಾರಾಷ್ಟ್ರ ಭಾರತ ದೇಶದಲ್ಲಿರುವ ಒಂದು ರಾಜ್ಯವೇ ಹೊರತು, ಮಹಾರಾಷ್ಟ್ರ ಇಡೀ ಭಾರತದ ಹೊರಗಿರುವ ಒಂದು ರಾಷ್ಟ್ರವಲ್ಲ. ಕೂಗುವುದು, ಆಂದೋಳನ ನಡೆಸುವುದು ಇಂಥ ಶಕ್ತಿ ಮಹಾರಾಷ್ಟ್ರದವರಿಗೆ ಇರುವ ಹಾಗೆ, ಅದೇ ರೀತಿಯಲ್ಲಿ ಭಾರತದ ಜನಾಂಗವಾದ ಮೈಸೂರಿನವರಿಗೂ ಹಾಗು ಎಲ್ಲರಿಗೂ ಇದೆ. ಮೈಸೂರಿನವರು ಅಂದಿನಿಂದ ಇಂದಿನವರೆಗೆ ಎಂದೆಂದಿಗೂ ನ್ಯಾಯವಾದ ಮಾರ್ಗದಲ್ಲಿ ರಾಜ್ಯಾಂಗದಲ್ಲಿ ಹಾಕಿಕೊಟ್ಟ ಮಾರ್ಗದಲ್ಲಿ ದೇಶದ ಐಕ್ಯತೆಗೆ ಧಕ್ಕೆ ಬಾರದಂತೆ ನಡೆದುಕೊಂಡು ಬರುತ್ತಿದೆ. ಆದುದರಿಂದ ಕೇಂದ್ರ ಸರಕಾರದಲ್ಲಿ ಇರತಕ್ಕಂಥ ನಾಯಕರು ಇಂದೇ ಮಹಾಜನ್ ಕಮಿಷನ್ ವರದಿ ತೀರ್ಪೆಂದು ಅಂಗೀಕರಿಸಿ ಅದಕ್ಕೆ ಅನುಗುಣವಾಗಿ ಒಂದು ಕಾನೂನು ಮಾಡುತ್ತಾರೆ ಎಂದು ನಾನು ಅಂದುಕೊಂಡಿದ್ದೇನೆ.

† ಶ್ರೀ ಮಹದೇವ್ ಜಿ. ಬಣಕಾರ್.—ಮಾನ್ಯ ಅಧ್ಯಕ್ಷರೇ, ಈ ದಿವಸ ಚರ್ಚೆ ನಡೆದಿರತಕ್ಕಂಥ ಮಹಾಜನ್ ಕಮಿಷನ್ ವರದಿ ಬಗ್ಗೆ ವಿರೋಧ ಪಕ್ಷವ ಸದಸ್ಯರಾದ ನಾವು ಮಾತನಾಡುವುದರಲ್ಲಿ ಚರ್ಚೆ ಮಾಡುವುದರಲ್ಲಿ ಏನೂ ಅರ್ಥವಿಲ್ಲ ಎಂಬ ಭಾವನೆ ಬರುತ್ತಿದೆ. ಮಹಾರಾಷ್ಟ್ರದ ಒತ್ತಾಯಕ್ಕೆ ಬಲಿ ಬಿದ್ದು ಕೇಂದ್ರ ಸರಕಾರದ ನಿರ್ಣಯದಂತೆ ಮಹಾಜನ್ ಕಮಿಷನ್ ನೇಮಕವಾಗಿ ಈಗ ವರದಿ ಬಂದಿದ್ದರೂ ಕೂಡ ಮಹಾರಾಷ್ಟ್ರದವರು ಈ ವರದಿಯನ್ನು ದೂರಿಕೊಂಡಿದ್ದಾರೆ. ಮೆಹೆರ್‌ಚಂದ್ ಮಹಾಜನ್ ಅವರು ಮೃತರಾದಂತೆ ಅವರ ವರದಿ ಸಹ ಮಹಾರಾಷ್ಟ್ರದ ದೃಷ್ಟಿಯಲ್ಲಿ ಮೃತವಾಗಿದೆ. ಹೀಗಿರುವಾಗ ನಾವು ಈ ವರದಿಯನ್ನು ಒಪ್ಪಬೇಕು ಎಂದು ಹೇಳುವುದರಲ್ಲಿ ಯಾವ ಅರ್ಥವಿಲ್ಲ. ವಧು ಮದುವೆಗೆ ಸಿದ್ಧವಾಗಿದೆ, ಪುರೋಹಿತರು ಮದುವೆ ಮಾಡುವುದಕ್ಕೆ ನಿಂತುಕೊಂಡಿದ್ದಾರೆ, ನಿಜಲಿಂಗಪ್ಪನವರು ಒಪ್ಪಿಕೊಂಡು ಮಂಗಳಸೂತ್ರ ಹಿಡಿದುಕೊಂಡು ಒಂದು ಕಡೆ ನಿಂತುಕೊಂಡಿದ್ದಾರೆ. ಆದರೆ ಚವಾಣ್ ಅವರು ಇದಕ್ಕೆ ಒಪ್ಪುವುದಿಲ್ಲ. ಇಂಥ ಸಂದರ್ಭದಲ್ಲಿ ತಾಳೀ ಕಟ್ಟುತ್ತೇನೆ ಅಂದರೆ ಅದು ಅಭಾಸವಾಗುತ್ತದೆ. ಈ ಮಹಾಜನ್ ಕಮಿಷನ್ ನೇಮಕ ಮಾಡಬೇಕು ಎಂದು ನಾವು ಯಾರೂ ಹೇಳಿರಲಿಲ್ಲ. ಈಗ ಅವರು ಮಾಡಿದತಪ್ಪಿಗೆ ನಾವು ಶಿಕ್ಷೆ ಅನುಭವಿಸಬೇಕಾಗಿದೆ. ಇಬ್ಬರು ಮುಖ್ಯ ಮಂತ್ರಿಗಳೂ ಸೇರಿ ಚರ್ಚಿಸಿ ಒಮ್ಮತಕ್ಕೆ ಬರಲು ಪ್ರಯತ್ನ ನಡೆಯಿತು. At a subsequent meeting of the Congress Working Committee in

(ಶ್ರೀ ಮಹದೇವ್ ಜಿ. ಬಣಕಾರ್)

July 66 it was resolved that the Chief Ministers of Maharastra and Mysore were requested to have a mutual discussion and arrive at a common understanding. They had three different meetings extending over a period of 2 or 3 months but nothing came out. ಎರಡೂ ರಾಜ್ಯದ ಮುಖ್ಯ ಮಂತ್ರಿಗಳು ಸೇರಿ ಮಾತನಾಡಿದರು. ಆದರೆ ಅಲ್ಲಿ ಈ ವಿವಾದ ಬಗೆ ಹರಿಯಲಿಲ್ಲ. ಇದನ್ನು ಕಾಂಗ್ರೆಸ್ ವರ್ಕಿಂಗ್ ಕಮಿಟಿಗೆ ಬಗೆಹರಿಸಲು ಒಪ್ಪಿಸಲಾಯಿತು. ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಆದೇಶದಂತೆ ಕೇಂದ್ರ ಸರಕಾರ ನೇಮಕ ಮಾಡಿದಂಥ ಈ ಕಮಿಟಿಯ ಅಭಿಪ್ರಾಯ ಕಾಂಗ್ರೆಸ್ ಅಭಿಪ್ರಾಯ ಬಿಂಬಿಸುತ್ತದೆ. 1954ನೇ ಇಸವಿಯಲ್ಲಿ ನಮ್ಮ ಮುಖ್ಯ ಮಂತ್ರಿಗಳು ಕೆ.ಪಿ.ಸಿ.ಸಿ. ಅಧ್ಯಕ್ಷರಾಗಿದ್ದರು. ಯಾವ ಯಾವ ಭಾಗವನ್ನು ನಾವು ಪಡೆಯಬೇಕು ಎನ್ನುವುದಕ್ಕೆ 1954ನೇ ಇಸವಿಯಲ್ಲಿ ಸ್ಟೇಟ್ಸ್ ರೀಆರ್ಗನೈಜೇಷನ್ ಕಮಿಟಿಗೆ ಒಪ್ಪಿಸಿದಂಥ ಹೊತ್ತಿಗೆಯಲ್ಲಿ ಕೇಳಿರುವಂತೆ ಆ ಭಾಗಗಳನ್ನು ಕೇಳಿದ್ದಾರೆಯೇ? ನಮಗೆ ಬರಬೇಕಾದ ಭಾಗ ಇನ್ನೂ ಬೇಕಾದಷ್ಟು ಇದೆ. ಜೋನಲ್ ಕೌನ್ಸಿಲ್ಲಿನಲ್ಲಿ ಮೈನರ್ ಅಡ್ಜಸ್ಟ್‌ಮೆಂಟ್ ಮಾಡುವುದಕ್ಕೆ ಸಾಧ್ಯವಿತ್ತು. ಎಸ್ಸಾರ್ಸೀ ಆಕ್ಟ್ ಜಾರಿಯಲ್ಲಿ ಬಂದ ಮೇಲೆ ಕೂಡ ಜೋನಲ್ ಕೌನ್ಸಿಲ್ಲಿನಲ್ಲಿ ಮಹಾರಾಷ್ಟ್ರದವರು ಬೆಳಗಾವಿ ಕೊಡಿ ಎಂದು ಧೈರ್ಯ ದಿಂದ ಕೇಳಿದ ಅವರ ಗಂಡಸ್ಥನಕ್ಕೆ ತಲೆಬಾಗ ಬೇಕಾಗುತ್ತದೆ. ತಮ್ಮ ದೊಡ್ಡಸ್ತಿಕೆ ಉಳಿಸಿಕೊಳ್ಳು ವುದಕ್ಕೆ ನಮ್ಮವರು ಬೆಳಗಾವಿಯಲ್ಲ ಬೆಂಗಳೂರನ್ನು ಸಹ ಕೊಟ್ಟು ಬಿಡುವಂತಹ ನಾಚಿಕೆಯಿಲ್ಲದ ಮಂತ್ರಿಗಳಾಗಿದ್ದಾರೆ. ಕಾಂಗ್ರೆಸ್ಸು ಈ ತೀರ್ಮಾನ ಮಾಡಿರುವುದರಿಂದ ಇದು ನಮ್ಮ ರಾಜ್ಯದ ಮೇಲೆ ಹೊಣೆಯಾಗುತ್ತದೆಂದು ಹೇಳುತ್ತೇನೆ. ಇದಕ್ಕೆ ಒಂದು ಉದಾಹರಣೆ ಕೊಡುತ್ತೇನೆ. ಚವಾಣರು ಪ್ರಾಂತೀಯ ಮನೋಭಾವನೆಯುಳ್ಳವರು ಕೇಂದ್ರದಲ್ಲಿ ಇಂದು ಮಂತ್ರಿಗಳಾಗಿದ್ದಾರೆ. 1952ನೇ ಇಸವಿಯಲ್ಲಿ ಸಂಕೇಶ್ವರ ಪಂಚಾಯತಿಯವರು ಮರಾಠಿಯಲ್ಲಿ ರಶೀದಿ ಬುಕ್ಕು ಪ್ರಿಂಟ್ ಮಾಡಲಿಲ್ಲ ಎಂಬ ವಾದ ಹೂಡಿದರು. ಆಗ್ಗೆ ಅಲ್ಲಿಯ ಡಿವಿಜನಲ್ ಕಮಿಷನರ್ ಅವರು ಮರಾಠಿ ಮತ್ತು ಕನ್ನಡ ಎರಡೂ ಭಾಷೆಯಲ್ಲಿ ರಶೀದಿ ಬುಕ್ ಪ್ರಿಂಟ್ ಮಾಡಬೇಕು ಎಂದು ಹೇಳಿದರು. ಕೇವಲ ಕನ್ನಡದಲ್ಲಿ ಪ್ರಿಂಟ್ ಮಾಡಿದುದಕ್ಕೋಸ್ಕರ ಆಗ್ಗೆ ಇದ್ದ ಸ್ಥಳೀಯ ಸಂಸ್ಥೆಯ ಮಂತ್ರಿಗಳು ಮರಾಠಿಯಲ್ಲಿ ಪ್ರಿಂಟ್ ಮಾಡಲಿಲ್ಲ ಎಂದು ಸಂಕೇಶ್ವರ ಪಂಚಾಯತಿಯನ್ನು ರದ್ದು ಮಾಡಿದರು. ಇಂಥಹ ಮಂತ್ರಿಗಳ ಕೈಯಲ್ಲಿ ನಮ್ಮ ರಕ್ಷಣೆ ರಾಷ್ಟ್ರದ ಜವಾಬ್ದಾರಿ ಕೊಟ್ಟಿರುವುದರಿಂದ ಯಾವ ಸಂದರ್ಭದಲ್ಲಿ ಏನು ಆಗುತ್ತದೆ ನಾವು ನಂಬುವ ಹಾಗೆ ಇಲ್ಲ. ನಮಗೆ ರಕ್ಷಣೆ ಇಲ್ಲ. ಮರಾಠಿ ಭಾಷೆಯ ಬಗ್ಗೆ ಶ್ರೀಮಾನ್ ಕದಂ ಅವರು ಹೇಳಿದರು. ಮರಾಠಿ ಭಾಷೆ ಮೊದಲು ಇರಲಿಲ್ಲ. ಮರಾಠಿ ಭಾಷೆ ಹಡೆದ ತಾಯಿ ಕನ್ನಡ ತಾಯಿಯಾಗಿದ್ದಾಳೆ. ಗುರ್ಲ ಹೊಸೂರಿನಲ್ಲಿ 26 ನವೆಂಬರ್ 1907ನೇ ದಿನ ಲೋಕಮಾನ್ಯ ಬಿ. ಜಿ. ಟಿಳಕ್ ಅವರು ಈ ರೀತಿ ಹೇಳಿದ್ದಾರೆ: He observed that Marathi and Kannada are not different. The same blood runs in both. The language for both was one and it was Kannada. ಕನ್ನಡ ಚರಿತ್ರೆ ಈ ರೀತಿ ಇದ್ದರೂ ಕೂಡ ಇಂದಿನ ದಿವಸ ಅದನ್ನು ನಂಬುವುದಕ್ಕಾಗುವುದಿಲ್ಲ ಎನ್ನುವ ಪರಿಸ್ಥಿತಿ ಬಂದಿದೆ.

* * * * * * * *

ವರ್ಕಿಂಗ್ ಕಮೀಟಿಯಲ್ಲಿ ತೀರ್ಮಾನವಾಗಿರುವ ಪ್ರಕಾರ ಪಾರ್ಲಿಮೆಂಟಿನಲ್ಲಿ ತೀರ್ಮಾನವಾಗಿದೆ ಎಂದು ಶ್ರೀಮಾನ್ ನಿಜಲಿಂಗಪ್ಪನವರು ಹೇಳಲಿಲ್ಲ. ಒನ್‌ಮ್ಯಾನ್ ಕಮಿಷನ್ ನೇಮಕದ ಬಗ್ಗೆ ನಾನು ನೋಡಲಿಲ್ಲ ಸಹಿ ಮಾಡಿ ಬಿಟ್ಟೆ ಎಂದು ಆಮೇಲೆ ಪ್ರಾಥಮಿಕ ಶಾಲೆಯ ವಿದ್ಯಾರ್ಥಿ ಉತ್ತರ ಕೊಡುವ ರೀತಿಯಲ್ಲಿ ನಮಗೆ ಹೇಳಿದುದು ತೀರಾ ನಾಚಿಕೆಗೇಡು. ಗೋವಾ ಮಹಾರಾಷ್ಟ್ರದಲ್ಲಿ ಸೇರಿಸ ಬೇಕು ಎಂಬ ಪ್ರಯತ್ನ ನಡೆದ ಕಾಲದಲ್ಲಿ ಮೈಸೂರಿನಲ್ಲಿ ಏತಕ್ಕೆ ಸೇರಿಸಬಾರದು ಎಂದು ಕೇಳಲಿಲ್ಲ. ಮಹಾರಾಷ್ಟ್ರದ ಎಂ.ಪಿ.ಗಳು ಸಮರ್ಥ ಆಡಳಿತಗಾರರು ಆಗಿದ್ದಾರೆ. ಮಹಾರಾಷ್ಟ್ರದವರು ಹರ್ಷೋದ್ಗಾರಮಾಡಿದಾಗ್ಗೆ ನಿಜಲಿಂಗಪ್ಪನವರು ನಗುತ್ತಿದ್ದರು. ಇವರು ಯಾವಾಗಲೂ ನಗುತ್ತಲೇ ಇರುತ್ತಾರೆ. ಈಗ ನಾವು ನಿಪ್ಪಾಣಿ ಖಾನಪೂರ ಪಟ್ಟಣಗಳನ್ನು ಕಳೆದುಕೊಳ್ಳುತ್ತಿದ್ದರೂಕೂಡ ವರದಿ ಒಪ್ಪಿಕೊಳ್ಳಬೇಕು ಎಂದು ಹೇಳುತ್ತಿದ್ದಾರೆ. ತಮಿಳರು ಅಥವಾ ಆಂದ್ರರ ಒತ್ತಾಯ ಬಂದರೆ ಕಾಮ ರಾಜರನ್ನು ಸಂತೋಷಪಡಿಸುವುದಕ್ಕೆ ಆಂಧ್ರಕ್ಕೋ ಮದ್ರಾಸಕ್ಕೊ ಬೆಂಗಳೂರು ನಗರವನ್ನು ಸಹ ಕೊಡುವುದಕ್ಕೆ ಇವರು ಹಿಂದು ಮುಂದು ನೋಡುವುದಿಲ್ಲ. ನಿಪ್ಪಾಣಿಯ ಬಗ್ಗೆ 1953ನೇ ಇಸವಿ ಯಲ್ಲಿ ಆಗಿನ ಮುಂಬಯಿ ಸರಕಾರದವರು ಒಂದು ಕಮೀಟಿ ನೇಮಕ ಮಾಡಿ ಬೆಳಗಾಂವ ಜಿಲ್ಲೆಯಲ್ಲಿ

* * * * Matter expunged as ordered by the Chair.

ಯಾವ ಯಾವ ಇಂಡಸ್ಟ್ರೀಜ ಪ್ರಾರಂಭಿಸಬಹುದು ಎನ್ನುವುದಕ್ಕೆ ಪರಿಶೀಲನೆ ಮಾಡಿದ್ದಾರೆ. ಅಲ್ಯೂಮಿನಿಯಂ ಫ್ಯಾಕ್ಟರಿ ಸುಣ್ಣದ ಕಲ್ಲು ಮಿನರಲ್ಸ್ ಕೈಗಾರಿಕೆ ಪ್ರಾರಂಭಿಸುವುದಕ್ಕೆ ಇದು ಬಹಳ ಫಲವತ್ತಾದ ಪ್ರದೇಶವಾಗಿದೆ ಎಂದು ಆ ವರದಿಯಲ್ಲಿ ಹೇಳಿದ್ದಾರೆ. 90 ಸಾವಿರ ಎಕರೆ ನೀರಾವರಿಯಾಗುವ ಒಂದು ಯೋಜನೆಯನ್ನು ನಂದಗಡ ಹತ್ತಿರ ಮೈಸೂರು ಸರಕಾರ ಮಾಡಿದ್ದಾರೆ. ಈ ಯೋಜನೆಗಳು ಕಾರ್ಯಗತವಾಗುವುದರಿಂದ ಅಲ್ಲಿಯ ಜನ ಸುಖವಾಗಿ ಬದುಕುತ್ತಾರೆ. ಆದರೆ ಈ ಪ್ರದೇಶ ಮೈಸೂರಿನಲ್ಲಿ ಇರಲಿ ಎಂದು ಹೇಳಲು ನಮ್ಮ ಮುಖ್ಯ ಮಂತ್ರಿಗಳಿಗೆ ಅಷ್ಟು ಧೈರ್ಯವಿಲ್ಲ. ಅವರು ಈ ಪ್ರದೇಶ ಕೊಡುವುದಕ್ಕೆ ಒಪ್ಪಿದ್ದಾರೆ. ಈ ಸಂದರ್ಭದಲ್ಲಿ ಕೋತಿಯು ಮೊಸರು ತಿಂದು ಹೋತಿನ ಬಾಯಿಗೆ ಒರಸಿತು ಎಂದು ಹೇಳುವ ಹಾಗೆ ಈಗ ಈ ಪಾಪ ಕಾರ್ಯವನ್ನು ಶ್ರೀಮಾನ್ ಜತ್ತಿಯವರ ಕೈಯಿಂದ ಮಾಡಿಸುತ್ತಿದ್ದಾರೆ. ಎಲ್ಲ ಕೇಂದ್ರದ ಮುಖಂಡರೂ ಕರ್ಣಾಟಕವನ್ನು ಕಡೆಗಣಿಸಿ ಮಹಾರಾಷ್ಟ್ರದ ಕಡೆಗೇ ಒಲವು ತೋರಿಸುತ್ತಿರುವಾಗ ಈ ಸಮಸ್ಯೆಯನ್ನು ಅವರು ಬಗೆಹರಿಸುತ್ತಾರೆಂದು ಹೇಳುವುದು ಶುದ್ಧ ತಪ್ಪು. ಸರ್ವ ಪಕ್ಷಗಳ ಸಮ್ಮೇಳನವನ್ನು ಹುಬ್ಬಳ್ಳಿಯಲ್ಲಿ ಕರೆದಾಗ ನಾನು ಶ್ರೀಮಾನ್ ಗುದ್ಲೆಪ್ಪನವರನ್ನು ಕೇಳಿದೆ—ನಿಮಗೆ ಕರ್ಣಾಟಕ ಬೇಕೋ ಅಥವಾ ಕಾಂಗ್ರೆಸ್ ಬೇಕೋ? ನಿಮಗೆ ಕಾಂಗ್ರೆಸ್ ಬೇಕಾಗಿತ್ತು ಎಂದರೆ ನಾಳೆಯ ದಿವಸ ಬೆಂಗಳೂರನ್ನು ಮಹಾರಾಷ್ಟ್ರಕ್ಕೆ ಕೊಡಲು ಶಿಫಾರಸು ಮಾಡಿದರೆ ಆಗ ಅದನ್ನೂ ನೀವು ಒಪ್ಪಬೇಕು, ಕರ್ಣಾಟಕ ಬೇಕಾಗಿತ್ತು ಎಂದರೆ ಕರ್ಣಾಟಕಕ್ಕಾಗಿ ಕರ್ಣಾಟಕದ ಜನತೆಗಾಗಿ ಬದುಕಬೇಕಾದ ಸಂದರ್ಭ ಬರುತ್ತದೆ ಎಂದು ಹೇಳಿದೆ. ಬೆಳಗಾವಿಯನ್ನು ನಮ್ಮಲ್ಲೇ ಉಳಿಸಿಕೊಳ್ಳಬೇಕು ಎಂದೂ ಹೇಳಿದೆ. ಆಗ ಅವರು ನೀವು ಏನು ಮಾಡುತ್ತೀರಿ ಎಂದು ಕೇಳಿದರು. ಅದಕ್ಕೆ ನಾನು ಹೇಳಿದೆ, ನಮ್ಮ ಪಕ್ಷದ ಅಧ್ಯಕ್ಷರಾದ ಗೋರೆ ಅವರು ಈ ಭಾಗಗಳನ್ನು ಮಹಾರಾಷ್ಟ್ರಕ್ಕೆ ಕೊಡಬೇಕು ಎಂದು ಅಭಿಪ್ರಾಯ ಪಟ್ಟರೆ ಆಗ ನನಗೆ ಪಿ.ಎಸ್.ಪಿ. ಬೇಕಾಗಿಲ್ಲ, ಕರ್ಣಾಟಕ ಬೇಕು ಎನ್ನುವ ನಿಲುವು ನನ್ನದು ಎಂದು ಹೇಳಿದೆ. ಪಕ್ಷದ ದೃಷ್ಟಿಯಿಂದ ಕೆಲಸ ಮಾಡುತ್ತೇವೆಂದು ಹೇಳಿ ಸ್ವಾರ್ಥ ಸಾಧನೆಗಾಗಿ, ಅಧಿಕಾರ ಗದ್ದುಗೆಯ ಪಟ್ಟ ಭದ್ರತೆಗಾಗಿ ಪಕ್ಷ ಬೇಕು ಎನ್ನುವವಕ್ಕಿಂತ ಕರ್ಣಾಟಕಕ್ಕಾಗಿ, ಕರ್ಣಾಟಕದ ಉಳಿವಿಗಾಗಿ ಕೆಲಸ ಮಾಡಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಮಾನ್ಯ ಮುಖ್ಯಮಂತ್ರಿಗಳು 1956 ರಿಂದ ಮುಖ್ಯ ಮಂತ್ರಿಗಳಾಗಿದ್ದಾರೆ. ಕೆಲವು ಕಾಲ ಅವರು ಮುಖ್ಯಮಂತ್ರಿಗಳಾಗಿ ಇಲ್ಲದೆ ಇದ್ದುದನ್ನು ಬಿಟ್ಟರೆ ಅವರು ಏಳು ವರ್ಷಕಾಲ ಮುಖ್ಯ ಮಂತ್ರಿಗಳಾಗಿರುವುದು ದೇಶಕ್ಕೇ ತಿಳಿದ ವಿಷಯವಾಗಿದೆ. ಏಳನೆ ಶನಿಕಾಟ ಇದುವರೆಗೂ ಇತ್ತು. ಅದು ಹೋಗಿ ಕರ್ಣಾಟಕಕ್ಕೆ ಇನ್ನು ಮುಂದೆ ಒಳ್ಳೆಯದು ಆಗುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ. ಈ ಸಂದರ್ಭದಲ್ಲಿ ನಾನು ಬರೆದಿರುವ ಒಂದು ಕವಿತೆಯನ್ನು ಓದಿ ನನ್ನ ಭಾಷಣವನ್ನು ಮುಕ್ತಾಯ ಮಾಡುತ್ತೇನೆ.

ರಣ ಕಹಳೆಯನು ಊದು

ಕಣ್ದೆರೆದು ನೋಡಿ ಓ ; ನಾಡಾಡಿ ನಾಯಕರೆ
　　ನಾಡ ದೇವಿಯ ಪ್ರಕೃತ ವಿಕೃತರೂಪ ;
ಕಣ್ಣ ಕೀಳ್ವರು ಕೆಲರು, ಮೂಗ ಕೊಯ್ವರು ಹಲರು
　　ಮತ್ತವಳ ಮುಡಿ, ಜಡೆಯ ಹಿಡಿದೆಳೆವ ಕೋಪ ;

ಒಂದೆಡೆಗೆ ಮದ್ರಾಸು, ಇನ್ನೊಂದು ಕಡೆ ಆಂಧ್ರ
　　ಕೇರಳದ ಕೆಂಗಣ್ಣು ನಮ್ಮ ಮೇಲೆ ;
ಎದೆಗೆ ಶೂಲವನಿಕ್ಕಿ, ಬೆನ್ನು ಮೂಳೆಯ ಮುರಿದು
　　ನುಂಗಿ ನೊಣೆಯುವುದೊಂದು ಅವರ ಲೀಲೆ ;

ಕನ್ನಡಕೆ ಹೋರಾಡಿ ನೆತ್ತರವ ನೀಡಿರುವ
　　ಸಂಗೊಳ್ಳಿ ರಾಯಣ್ಣ ಎರವಾದನೆ ?
ಕನ್ನಡಕೆ ಸಂಸ್ಕೃತಿಯ ದೀಕ್ಷೆಯನು ಕೊಟ್ಟಿರುವ
　　ಸಿದ್ಧರಾಮನು ಹೆರರ ಪಾಲಾದನೆ ?

(ಶ್ರೀ ಮಹದೇವ್ ಜಿ. ಬಣಕಾರ್)

ತಾಯಿ, ಮಕ್ಕಳನಗಲ, ಕರುಬಿ ಕಳವಳಗೊಂಡು
ಶಾಪ ಕೊಡುತಿಹಳೆಂದು ತಿರುಹೆಯಂತೆ ;

'' ಯಾವ ಪಾಪಿಯು ಕೈಲಿ ಈ ರಾಜ್ಯವಿಂತಾಯ್ತು ?
ಅವನ ಹುಟ್ಟಡಗಲೈ ಬೆಳೆಯದಂತೆ ''

ಕನ್ನಡದ ಕಣಕಣಕು ಕಡುಗಲಿಯು ಕೆಚ್ಚಿಹುದು
ರಣ ಕಹಳೆಯನು ಊದು ರೌದ್ರ ರಸಕೆ;

ತಾಯಿಯನು ಬಲಿಕೊಟ್ಟು ತಾನು ಸುಖಿಸುವ ಮಗನು
ಇದ್ದರೂ ಸತ್ತಂತೆ '' ವಂಶ '' ಪದಕೆ ;

ಬಂಡೆದ್ದ ಮಹಾರಾಷ್ಟ್ರದಾಸುರೀ ಕೃತಿಗಾಗಿ
ಮಣಿದು ಮಾನವತೆಯನು ಮರೆಯಬೇಕೆ ?

ನಾಡದೇವಿಯ ಮಾನ ಭಂಗವಾಗುವುದನ್ನು
ಕಂಡು ಷಂಢರತೆರದಿ ಕೂಡ್ರಬೇಕೆ ?

[MR. DEPUTY SPEAKER in the Chair]

ಅಧಿಕಾರದಲ್ಲಿರುವ ಪಕ್ಷದವರು ದೇಶವನ್ನು ಗಂಡಾಂತರದಲ್ಲಿ ಸಿಲುಕಿಸಿ, ತಮ್ಮ ಸ್ವಾರ್ಥ ಲಾಲಸೆಗಾಗಿ, ತಮ್ಮ ಪಕ್ಷದ ತೀರ್ಮಾನವನ್ನು ಎರಡೂವರೆ ಕೋಟಿ ಜನತೆಯ ತೀರ್ಮಾನ ಎಂದು ಈ ವರದಿಯನ್ನು ಚರ್ಚೆಗೆ ಇಟ್ಟಿದ್ದಾರೆ. ಇದನ್ನು ಒಪ್ಪತಕ್ಕುದಲ್ಲ. ವಿವೇಕಿಗಳಾದ ಮನುಷ್ಯರು ಯಾರೂ ಅವನ್ನು ಒಪ್ಪುವುದಿಲ್ಲ. ಇವತ್ತು ಶ್ರೀಮಾನ್ ನಿಜಲಿಂಗಪ್ಪನವರು ಅಧ್ಯಕ್ಷರಾದ ಮೇಲೆ ಏನು ಮಾಡುತ್ತಾರೆಯೋ ಗೊತ್ತಿಲ್ಲ. ಇವರು ದೇಶದಲ್ಲಿ ಭಾವೈಕ್ಯತೆ ಇರಬೇಕು ಎಂದು ಹೇಳುತ್ತಾರೆ. ಇವರು ಯಾವುದನ್ನು ಭಾವೈಕ್ಯತೆ ಎಂದು ಕರೆಯುತ್ತಿರುವುದು ? ಶ್ರೀಮಾನ್ ರಂಗನಾಥ ದಿವಾಕರ್ ಅವರು ಹೇಳಿದ್ದಾರೆ: ಇದು ಬಾರ್ಡರ್ ಡಿಸ್‌ಪ್ಯೂಟ್ ಅಲ್ಲ, ಅಂತರ ರಾಜ್ಯಗಳ ಮಧ್ಯೆ ಇರುವ ಗಡಿಗೆ ಸಂಬಂಧ ಪಟ್ಟ ವಿಷಯ ಎಂದು.

ಇವತ್ತು ಮಹಾಜನ್ ಆಯೋಗದ ವರದಿಯ ಪ್ರಕಾರವಾಗಿ ಮೈಸೂರು ದೇಶಕ್ಕೆ ಮೂರು ಕೋಟಿ ರೂಪಾಯಿ ಆದಾಯ ಬರತಕ್ಕ ನಿಪ್ಪಾಣಿಯನ್ನು ಕಳೆದುಕೊಳ್ಳಬೇಕಾಗಿದೆ, ಉತ್ತಮ ನೀರಾವರಿ ಪ್ರದೇಶವಾಗುವಂಥ ಮತ್ತು ನೀರಾವರಿ ಕೆಲಸಕಾರ್ಯಗಳನ್ನು ಮಾಡುತ್ತಿರುವಂಥ ನಂದಗಡ ಭಾಗವನ್ನು ಕಳೆದುಕೊಳ್ಳಬೇಕಾಗಿದೆ. ಅಲ್ಲದೆ ಖಾನಾಪುರ ಪ್ರದೇಶವನ್ನು, ಹೆಚ್ಚು ಖನಿಜ ಸಂಪತ್ತು ಇರುವಂಥ ಪ್ರದೇಶವನ್ನು ಕಳೆದುಕೊಳ್ಳಬೇಕಾಗಿದೆ. ಅಲೂರು, ಅದವಾನಿ, ಹೊಸೂರು, ಮಡಕಸಿರ, ಮುಂತಾದ ಭಾಗಗಳನ್ನು ಕಳೆದುಕೊಂಡಿದ್ದೇವೆ. ಮಹಾರಾಷ್ಟ್ರದವರು ಗಡಿ ವಿವಾದವನ್ನು ಒಡ್ಡಿದಾಗ, ಮೈಸೂರು ಮಹಾರಾಷ್ಟ್ರ ಗಡಿ ವಿವಾದದ ಬಗ್ಗೆ ಮಹಾಜನ್ ಆಯೋಗವನ್ನು ನೇಮಕ ಮಾಡಿದಾಗ, ನಮ್ಮ ರಾಜ್ಯಕ್ಕೆ ಹೊಂದಿಕೊಂಡಿರುವಂಥ ಆಂಧ್ರದ ಜೊತೆಗೆ, ಮದ್ರಾಸ್ ಜೊತೆಗೆ ಮತ್ತು ಕೇರಳದ ಜೊತೆಗೆ ಇರುವಂಥ ನಮ್ಮ ಗಡಿ ಏನಿದೆ ಅದನ್ನೆಲ್ಲ ಒಮ್ಮೆಗೆ ತೀರ್ಮಾನ ಮಾಡತಕ್ಕ ವ್ಯವಸ್ಥೆಯನ್ನು ಒಳಗೊಂಡಂಥ ಒಂದು ಕಮಿಟಿಯನ್ನು ನೇಮಕ ಮಾಡಿದ್ದರೆ ಈ ಸಭೆಗೆ ಬಾಧ್ಯತೆ ಇದೆ ಎನ್ನುವುದನ್ನು ನಾನು ಒಪ್ಪುತ್ತಿದ್ದೆ. ಆದರೆ ಆಗಿರುವುದಾದರೂ ಏನು ? ತಬಲಕ್ಕೆ ಕರಣಿ ಹಚ್ಚಿದರೆ ಒಳ್ಳೆಯ ನಾದ ಬರುತ್ತದೆ. ಹಾಗೆಯೇ ಯಾವುದಾದರೂ ಒಂದು ಆಸೆಯನ್ನು ತೋರಿಸಿದರೆ ಯಾರು ತಾನೇ ಅದಕ್ಕೆ ವಶವಾಗುವುದಿಲ್ಲ ? ಅಖಿಲ ಭಾರತ ಅಧಿವೇಶನದಲ್ಲಿ ನಿಮ್ಮನ್ನು ಮುಂದಿನ ಅಧ್ಯಕ್ಷರಾಗಿ ಮಾಡುತ್ತೇವೆ ಎಂದು ಮಾನ್ಯ ನಿಜಲಿಂಗಪ್ಪನವರಿಗೆ ಹೇಳಿರಬಹುದು ಅಥವಾ ನಿಮಗೆ ಏನೋ ಕೊಡುತ್ತೇವೆ ಎಂದು ಹೇಳಿರಬಹುದು.........

ಶ್ರೀ ಎಸ್. ಆರ್. ಕಂಠಿ.—ಅವರಿಗೆ ಕಾಂಗ್ರೆಸ್ ಅಧ್ಯಕ್ಷ ಪದವಿ ಬೇಕೇ ಆಗಿರಲಿಲ್ಲ. ಅವರು ಬೇಡ ಎಂದು ಹೇಳಿದರೂ ಅದನ್ನೂ ಅವರ ಕೊರಳಿಗೆ ಕಟ್ಟಿದ್ದಾರೆ.

ಶ್ರೀ ಮಹದೇವ್ ಜಿ. ಬಣಕಾರ್.—ಕೊರಳಿಗೆ ಕಟ್ಟಿದ್ದಾರೆ ಎಂದು ಹೇಳುತ್ತಾರೆ. ಇನ್ನೂ ಏನೇನು ಕಟ್ಟುತ್ತಾರೆ ಎನ್ನುವುದನ್ನು ನೋಡುತ್ತ ಇರಿ, !

ಆದು ಭಾರತದ ಕಾಂಗ್ರೆಸ್ ಪಕ್ಷದ ಆದೇಶದಂತೆ ಮಂತ್ರಿಮಂಡಲದ ಸಭೆ ಸೇರಿಸಿ ನಾವು ಒಪ್ಪಿಕೊಂಡಿದ್ದೇವೆ, ನೀವೂ ಒಪ್ಪಿಕೊಳ್ಳಿ ಎಂದರು. ವಿರೋಧ ಪಕ್ಷದವರ ಅಭಿಪ್ರಾಯವನ್ನು ಕೇಳುವುದಕ್ಕಾಗಲೀ, ಸಭೆಯನ್ನು ಕರೆದು ಅವರ ಒಪ್ಪಿಗೆಯನ್ನು ಪಡೆಯುವುದಕ್ಕೆ ಆಗಲೀ ಅವರು ಪ್ರಯತ್ನ ಮಾಡಲಿಲ್ಲ. ಅವರು ನಮ್ಮ ದೇಶದ ಸರ್ವಾಧಿಕಾರಿಯಾಗಿದ್ದಾರೆ. ಅವರು ಎಲ್ಲರಿಗೂ ಉಪದೇಶವನ್ನು ಕೊಡುವುದಕ್ಕೆ ಹೊರಟಿದ್ದಾರೆ.

ಮಹಾಜನ ಅವರ ವರದಿಯ ಪ್ರಕಾರ ತೀರ್ಮಾನ ಮಾಡುವುದಾದರೆ, ಬೆಳಗಾಂಗೆ ಐದು ಮೈಲಿ ದೂರದಲ್ಲಿ ಮೈಸೂರು ಮಹಾರಾಷ್ಟ್ರದ ಗಡಿ ಸೀಮಿತವಾಗುವುದಾದರೆ, ಬೆಳಗಾಂ ನಗರವನ್ನು ಎಷ್ಟು ದಿವಸ ಸುರಕ್ಷಿತವಾಗಿ ಇಟ್ಟುಕೊಳ್ಳಬಹುದು ಎನ್ನುವುದನ್ನೂ ಆಲೋಚನೆ ಮಾಡಿ. ಇದೆಲ್ಲ ಹೊಸವಿಚಾರವೇನಲ್ಲ. ನಿಪ್ಪಾಣಿಯ ಗಡಿಯಿಂದಾಚೆ ಒಂದು ಫರ್ಲಾಂಗ ದೂರದಲ್ಲಿ ಮಹಾರಾಷ್ಟ್ರದವರು ಶಿವಾಜಿ ಯೂನಿವರ್ಸಿಟಿಯನ್ನು ತೆರೆದರು. ಅವರ ಒಂದು ವಿಚಾರ ಮತ್ತು ನಮ್ಮ ಹೇಡಿತನ ಎರಡನ್ನೂ ತೋರಿಸುವುದಕ್ಕೆ ಹೇಳುತ್ತಿದ್ದೇನೆ. ಈ ರೀತಿ ಮಾಡಿ ನಿಪ್ಪಾಣಿಯನ್ನು ನುಂಗಿದರು. ಐದು ಮೈಲಿ ದೂರದಲ್ಲಿ ಗಡಿಯನ್ನು ಮಾಡುವುದಾದರೆ ಬೆಳಗಾಂ ನಗರವನ್ನು ಅವರು ಖಂಡಿತವಾಗಿ ಬಿಡುವುದಿಲ್ಲ. ಜೊತೆಗೆ ನಾನು ಒಂದು ಮಾತನ್ನು ಹೇಳುತ್ತೇನೆ, ಮಹಾರಾಷ್ಟ್ರದವರನ್ನು ಟೀಕೆ ಮಾಡುವುದಕ್ಕಿಂತ ಅವರು ಏನು ಮಾಡುತ್ತಾರೆ ಎನ್ನುವುದನ್ನೂ ನಾವು ತಿಳಿಯಬೇಕು, ಅವರ ದೇಶಾಭಿಮಾನ ಎಷ್ಟಿದೆ ಎನ್ನುವುದನ್ನೂ ತಿಳಿಯಬೇಕು. ಮಾರಾಠಿ ಜನ, ಲಾರಿ ಡ್ರೈವರುಗಳು ಸಾಮಾನುಗಳನ್ನು ನಮ್ಮ ರಾಜ್ಯಕ್ಕೆ ತರುತ್ತಿರುತ್ತಾರೆ. ಒಬ್ಬ ಲಾರಿ ಡ್ರೈವರನಿಗೆ ಇರತಕ್ಕ ದೇಶಾಭಿಮಾನ ಈ ದೇಶದ ಮುಖ್ಯ ಮಂತ್ರಿಗಳಿಗೆ ಇಲ್ಲ ಎಂದು ಧೈರ್ಯವಾಗಿ ಹೇಳುತ್ತಿದ್ದೇನೆ. ನಾನು ಸಾಮಾನ್ಯವಾಗಿ ಲಾರಿಗಳಲ್ಲಿ ಪ್ರಯಾಣ ಮಾಡುತ್ತೇನೆ. ಆ ಲಾರಿಯ ಡ್ರೈವರ್ ಬೆಳಗಾಂ ನನ್ನದು ಎಂದು ಹೇಳುತ್ತಿದ್ದ. ಕೇವಲ ಅಧಿಕಾರಕ್ಕಾಗಿ ಕುಳಿತುಕೊಂಡು ದೇಶವನ್ನು ಹರಾಜಿಗೆ ಇಡುತ್ತಿದ್ದೀರಿ.

ಮೊನ್ನೆ ಹೇಳಿದರು, ವಿರೋಧ ಪಕ್ಷದವರನ್ನು ಕೇಳಿ ಈ ಸಭೆಯನ್ನು ಕರೆದಿದ್ದೇವೆ ಎಂದು. ವಿರೋಧ ಪಕ್ಷದವರ ಅಭಿಪ್ರಾಯ ಕೇಳಿ ಕ್ಯಾಬಿನೆಟ್‌ನಲ್ಲಿ ತೀರ್ಮಾನ ಮಾಡಿದ್ದೀರಾ ? ಮುಖ್ಯ ಮಂತ್ರಿಯವರು ಸರ್ವಾಧಿಕಾರಿಗಳಾಗಿದ್ದಾರೆ. ನೀವೆಲ್ಲ ಕೈ ಎತ್ತುವ ಜನ, ನೀವು ಕಣ್ಣು ತೆರೆಯುವುದಿಲ್ಲ.

ಶ್ರೀ ಕೆ. ಎಚ್. ಪಾಟೀಲ್.—ವಿರೋಧ ಪಕ್ಷದವರಿಗೆ ಪ್ರತಿಯೊಬ್ಬರಿಗೂ ಮುಖ್ಯ ಮಂತ್ರಿಯವರು ಆಹ್ವಾನ ಕೊಟ್ಟಿರಲಿಲ್ಲ. ನಮ್ಮನ್ನು ಕರೆದು ಈ ಬಗ್ಗೆ ಕೇಳಿದಾಗ ಮೂರು ನಾಲ್ಕು ಜನರನ್ನು ಕರೆದು ಕೇಳುವುದು ಸರಿಯಲ್ಲ, ಅಸೆಂಬ್ಲಿಯನ್ನು ಕರೆದು ಸಭೆಯ ಅಭಿಪ್ರಾಯವನ್ನು ಪಡೆಯಿರಿ ಎಂದು ಹೇಳಿದೆವು.

ಶ್ರೀ ಮಹದೇವ್ ಜಿ. ಬಣಕಾರ್.—ಕೊನೆಯದಾಗಿ ಈ ರಾಜ್ಯದ ಗಡಿಗೆ ಸಂಬಂಧಪಟ್ಟ ಹಾಗೆ ಪಾಂಥೂ ರಿಪೋರ್ಟ ಇದೆ. ಅದರಲ್ಲಿ ಕೂಡ ಈ ಭಾಗಗಳೆಲ್ಲ ಕರ್ಣಾಟಕದಲ್ಲಿರಬೇಕು ಎಂದು ಇದೆ. ಇದರ ಉಲ್ಲೇಖವನ್ನೂ ಕೂಡ ಮಹಾಜನ ಅವರು ತಮ್ಮ ವರದಿಯಲ್ಲಿ ಮಾಡಿದ್ದಾರೆ. ಬೆಳಗಾಂ, ಕಾರವಾರ ಈ ಭಾಗಗಳನ್ನು ಕೂಡ ಸುಲಭವಾಗಿ ನುಂಗಬಹುದು ಎನ್ನುವ ಧೋರಣೆ ಮಹಾರಾಷ್ಟ್ರೀಯರಲ್ಲಿ ಹುಟ್ಟುತ್ತಿದೆ.

6-00 P.M.

ಈ ಹೊತ್ತು ಮುಖ್ಯಮಂತ್ರಿಗಳು ಒಪ್ಪಿದರೆ ಅದು ಅಂತಿಮ ತೀರ್ಮಾನವಾಗುತ್ತದೆಯೇ ಎಂದು ಕೇಳುತ್ತಿದ್ದೇನೆ. One more significant fact has to be noted. The question in respect of different areas now claimed by Maharashtra was specifically raised in Parliament and decided. ಇದನ್ನು ಪಾರ್ಲಿಮೆಂಟ್ ತೀರ್ಮಾನ ಮಾಡಬೇಕು. ಅಂತಿಮ ತೀರ್ಮಾನ ಎನ್ನುವ ನಂಬಿಕೆ ಇರುವುದಾದರೆ 1956 ರಲ್ಲಿ ಎಸ್. ಆರ್. ಆಕ್ಟ್ ಪಾರ್ಲಿಮೆಂಟ್ ಮಾಡಿದೆ. ಇವೊತ್ತು ಕೇಂದ್ರ ಸರ್ಕಾರದಲ್ಲಿ ಪ್ರಭಾವವಾಗಿರತಕ್ಕವರು, ಆಡಿದ್ದೇ ಮಾತು, ನಡೆದಿದ್ದೇ ದಾರಿ ಎನ್ನುವುದನ್ನು ಅನುಸರಿಸಿದರೆ ಅದು ಖಂಡನೀಯ. ಇವೊತ್ತು ಪೂರ್ತಿ ಮಹಾರಾಷ್ಟ್ರದವರ ಪರವಾಗಿ ವರದಿ ಇದ್ದಿದ್ದರೆ ಅವರು ಮಹಾಜನ್ ವರದಿಯನ್ನು ತಲೆಮೇಲೆ ಇಟ್ಟುಕೊಳ್ಳುತ್ತಿದ್ದರು. ಯಾವ ಭಾಗ ಬೇರೆಯವರಿಗೆ ಹೋದರೂ ಅವರು ಒಪ್ಪುವುದಿಲ್ಲ. ಬೆಳಗಾವಿ, ಕಾರವಾರಗಳನ್ನು ಮಹಾರಾಷ್ಟ್ರಕ್ಕೆ ರೆಕಮೆಂಡ್ ಮಾಡತಕ್ಕ ಸಮಿತಿ ಎಂದು ಬರುತ್ತದೆ ಅಲ್ಲಿಯವರೆಗೂ ಅವರು ಹಿಡಿದ ಹಠ ಬಿಡುವುದಿಲ್ಲ. ಇದು ಕೊನೆಯ ತೀರ್ಮಾನವಾಗಿದೆ ಎಂದು ಇದಕ್ಕೆ ತೆರೆ ಎಳೆಯಬೇಕು ಎನ್ನುವ ದೃಷ್ಟಿಯಿಂದ ಒಪ್ಪಬಹುದು. ಆದರೆ ಇಲ್ಲಿಯೂ ನಾವು

(ಶ್ರೀ ಮಹದೇವ್ ಬಿ. ಬಣಕಾರ್)

ಮೋಸ ಹೋಗುತ್ತೇವೆ. ನಮಗೆ ದಾರಿ ತಪ್ಪಿಸುತ್ತಾರೆ. ಅದ್ದರಿಂದ ನಮ್ಮ ಬಾಯಿಂದ 'ಹೂಂ' ಎನ್ನಿಸಿ ಪಾಪದ ಕಾರ್ಯವನ್ನು ಮಾಡಿಸುವ ಹವ್ಯಾಸಕ್ಕೆ ತಾವು ಹೋಗಬೇಡಿ. ಅದನ್ನು ಕಾಂಗ್ರೆಸ್ ವರ್ಕಿಂಗ್ ಕಮಿಟಿಯಲ್ಲಿ ಪ್ರಯತ್ನ ಮಾಡಿ, ಕಾಂಗ್ರೆಸ್ಸಿನವರು ಜನರ ದೃಷ್ಟಿಯಲ್ಲಿ ಜನಾನುರಾಗಿ ಯಾಗಿ ಬಂದಿರುವುದರಿಂದ ಇದು ನಿಮ್ಮ ತೀರ್ಮಾನ, ನಿಮ್ಮ ಅಭಿಪ್ರಾಯ ಎಂದು ಕಳುಹಿಸಬೇಕೇ ವಿನಾ ವಿರೋಧ ಪಕ್ಷ ಕೇಳಿದೆವು ಎಂದು ಹೇಳಬಾರದು. ಇಲ್ಲಿ ಚರ್ಚೆ ಅದಮೇಲೆ ಇಲ್ಲಿಯ ಅಭಿಪ್ರಾಯವನ್ನು ಇರುವಂತೆ ಶ್ರೀಮಾನ್ ಕಂಠಿಯವರು ಮಾಡಬೇಕು. ನೀವು ಮುಂದಿನ ರಾಜ್ಯದ ಮುಖ್ಯಮಂತ್ರಿ ಗಳಾಗುತ್ತೀರಿ. ಅಲ್ಲದೆ ಶ್ರೀಮಾನ್ ನಿಜಲಿಂಗಪ್ಪನವರು ಮುಖ್ಯಮಂತ್ರಿ ಪದವಿಯನ್ನು 2 ವರ್ಷ ಇವರಿಗೆ ಒಪ್ಪಿಸಿ, ಡೆಲ್ಲಿಯಿಂದ ವಾಪಸ್ಸು ಬಂದಮೇಲೆ ಮುಖ್ಯಮಂತ್ರಿ ಪದವಿಯನ್ನು ಬಿಡುವ ದಡ್ಡರು ಯಾರು ? ನೀವೇ ! ಅದಕ್ಕೆ ದೊಡ್ಡ ಜವಾಬ್ದಾರಿ ಸ್ಥಾನಕ್ಕೆ ಹೋಗತಕ್ಕಂಥವರು ನೀವೇ ! ವಿರೋಧಪಕ್ಷದವರಿಗೆ ಮಸಿಯನ್ನು ಬಳಿಯಬೇಡಿ. ಈ ಒಂದು ಮಹತ್ವದ ರಿಪೋರ್ಟ್ ಪಾರ್ಲಿಮೆಂಟ್‌ನಲ್ಲೂ ಕೂಡ ಪಾಸಾಗುವುದಿಲ್ಲ. ಯಥಾಪ್ರಕಾರ ಬೆಳಗಾಂ ಬಗ್ಗೆ ಹೋರಾಟ ನಡೆಯುತ್ತದೆ ಎಂದು ನನಗೆ ಅನಿಸುತ್ತದೆ. ಬೆಳಗಾಂ ಮೈಸೂರಿಗೆ ಸೇರಿರುವುದು ಮಹಾರಾಷ್ಟ್ರಕ್ಕೆ ಸಂತೋಷ ವಿಲ್ಲ. ಅವರು ಅದನ್ನು ಬಿಟ್ಟುಕೊಡುವುದಿಲ್ಲ. ಕಾಂಗ್ರೆಸ್ ಸರ್ಕಾರ ತಮ್ಮ ನಿರ್ಧಾರವನು ವ್ಯಕ್ತಪಡಿಸಬೇಕೆಂದು ಹೇಳಿ ನನ್ನ ಎರಡು ಮಾತುಗಳನ್ನು ಮುಕ್ತಾಯಮಾಡುತ್ತೇನೆ.

† ಶ್ರೀ ಕೆ. ಎಂ. ಪುಟ್ಟಸ್ವಾಮಿ (ಚಿಕ್ಕಬಳ್ಳಾಪುರ).—ಮಾನ್ಯ ಸಭಾಧ್ಯಕ್ಷರೇ, ಮಹಾಜನ್ ತೀರ್ಪನ್ನು ನಾವು ಒಪ್ಪಬೇಕೆಂದು ಹೇಳುವ ಸಂದರ್ಭದಲ್ಲಿ ಕೆಲವು ಮಾತಗಳನ್ನಾಡಬೇಕಾಗಿದೆ. ಮಹಾರಾಷ್ಟ್ರ ಇಂಡಿಯಾ ದೇಶದಲ್ಲಿ ಇದೆ ಎನ್ನುವ ಭಾವನೆ ಇರಬೇಕು. ಮರಾಠಿ ಜನ ನಾವು ಮಹಾರಾಷ್ಟ್ರದವರು ಎಂದು ಹೇಳಿಕೊಳ್ಳುತ್ತಾ ಇದ್ದಾರೆ. ತಾವು ಮಹಾರಾಷ್ಟ್ರೀಯರು ಎನ್ನುವುದು ಮಹಾ ತಪ್ಪು. ಮಹಾಶ್ರೇಷ್ಠರಾಗಿದ್ದಂಥ ಮಹಾನ್ಯಾಯಾಧೀಶರಾದ ಮಹಾಜನರವರನ್ನು ನೇಮಕಮಾಡಿದಂಥವರು ಮಹಾರಾಷ್ಟ್ರದವರು.

ಈವೊತ್ತಿನ ದಿವಸ ಶ್ರೇಷ್ಠನ್ಯಾಯಾಧೀಶರಾಗಿದ್ದಂಥ ಮಹಾಜನರವರ ವರದಿ ಒಂದು ತೀರ್ಪು ಅಲ್ಲವೆಂದು ಶ್ರೀಮಾನ್ ಶುಕ್ಲ ಮತ್ತು ಚವಾಣರವರು ಹೇಳುತ್ತಾ ಇದ್ದಾರೆ. ನಾವು ಏನಾದರೂ ಬಂದು ಗೋಗರೆದು ವನ್‌ಮ್ಯಾನ್ ಕಮೀಷನ್ ಮಾಡಿ ಎಂದು ಹೇಳಿದೆವೇ? ನಾವು ಹೇಳಲಲ್ಲ. ಅವರೇ ಆ ಕಮಿಷನ್ ನೇಮಕಕ್ಕೆ ಕಾರಣರು. ಈವೊತ್ತಿನ ದಿವಸ ಅವರು ಈ ವರದಿಯನ್ನು ತಿರಸ್ಕಾರ ಮಾಡುತ್ತಾ ಇದ್ದಾರೆ. ಇಂಡಿಯಾದೇಶ ತನ್ನ ಸ್ವಾತಂತ್ರ್ಯವನ್ನು ಬಹಳ ಪ್ರಯಾಸಪಟ್ಟು ಗಳಿಸಿತು. ಆ ಸಮಯದಲ್ಲಿ ಇಂಡಿಯಾದೇಶ ಒಂದೇ ರಾಷ್ಟ್ರ, ಒಂದೇ ಜನ ಎನ್ನುವ ಭಾವನೆ ಇತ್ತು. ಭಾಷಾವಾರು ಪ್ರಾಂತ ಮಾಡಬೇಕು ಎಂದು ಹೇಳಿ ಆಂಧ್ರದ ಪೊಟ್ಟಿ ಶ್ರೀರಾಮುಲುರವರು ಪ್ರಾಣಬಿಟ್ಟಿದ್ದಕ್ಕೋಸ್ಕರ ಭಾಷಾವಾರು ಪ್ರಾಂತಗಳನ್ನು ರಚನೆಮಾಡಿ ಮಹಾ ಅಪರಾಧ ಮಾಡಿದರು. ಮೊದಲನಿದಂಲೂ ಮರಾಠಿಯವರು ಹೇಳುವುದು ಒಂದು, ಮಾಡುವುದು ಒಂದು. ಅವರು ಹಿಂದೆ ನಮ್ಮ ಮೈಸೂರು ಸೀಮೆಯ ಮೇಲೆ ಇಂಗ್ಲೀಷರ ಜೊತೆಯಲ್ಲಿ ಸೇರಿಕೊಂಡು ನೈಜಾಮರ ಜೊತೆ ಸೇರಿ ಅನೇಕ ಬಾರಿ ಮೈಸೂರಿನ ಮೇಲೆ ಯುದ್ಧ ಮಾಡಿದರು. ಇಲ್ಲಿರತಕ್ಕಂಥ ಸರ್ವಸಂಪತ್ತನ್ನು ಹಾಳು ಮಾಡಬೇಕು ಎನ್ನುವ ತತ್ವವನ್ನು ಇಟ್ಟುಕೊಂಡಿರುವರು ಮರಾಠಿಯವರು. ನಮ್ಮ ಕರ್ನಾಟಕ ದೇಶ ಸುಭಿಕ್ಷವಾಗಿರತಕ್ಕಂಥಾದ್ದನ್ನು ನಾವು ಕಬಳಿಸಬೇಕು ಎನ್ನುವ ಧೋರಣೆ ಇಟ್ಟುಕೊಂಡಿರುವವರು ಮರಾಠಿಯವರು. ಡೆಲ್ಲಿಯಲ್ಲಿರತಕ್ಕ ನಮ್ಮ 27 ಜನ ಎಂ. ಪಿ. ಗಳು ವನ್ ಮ್ಯಾನ ಕಮಿಷನ ವರದಿಯನ್ನು ಟೀಕಿಸಿದಾಗ ಏನು ಮಾಡುತ್ತಾ ಇದ್ದರು ಎಂದು ಅವರನ್ನು ನಾವು ಕೇಳಬೇಕು. ನಮ್ಮ 27 ಜನ ಎಂ ಪಿ. ಗಳು ಬಾಯಿಮುಚ್ಚಿಕೊಂಡು ಮರಾಠಿಯವರು ಹೇಳಿದ್ದೇ ಸರಿ ಎಂದು ಒಪ್ಪಿಕೊಳ್ಳುವುದಕ್ಕೆ ಅಲ್ಲಿಗೆ ಹೋಗಿದ್ದಾರೆಯೇ ? ಅಥವಾ ಇಲ್ಲಿ ಕರ್ನಾಟಕದ ಮಾನ ಮರ್ಯಾದೆಯನ್ನು ಉಳಿಸಿಕೊಳ್ಳಬೇಕು ಎನ್ನುವ ತತ್ವದ ಮೇಲೆ ಹೋಗಿದ್ದಾರೆಯೇ ಎಂದು ಅವರು ನಮಗೆ ಜವಾಬು ಕೊಡಬೇಕಾಗಿದೆ. ಹಿಂದೆ ನಮ್ಮ ಕರ್ನಾಟಕದ ಸಂಸ್ಕೃತಿಗೆ ಧಕ್ಕೆ ಬಂದಾಗ, ನಮ್ಮ ದೇಶದಲ್ಲಿ ಇಂಗ್ಲೀಷರ ಧಾಳಿ ನಡೆದಾಗ, ಕೇರಳದಲ್ಲಿ ಮಾಡಿದ ಅಕೃತ್ಯಗಳ ವಿರುದ್ಧ ನಮ್ಮ ಕರ್ನಾಟಕದ ಅರಸರು ಅಲ್ಲಿಗೆ ಹೋಗಿ ಇಂಗ್ಲೀಷರನ್ನು ಇಂಡಿಯಾದೇಶದಿಂದ ಹೊಡೆದೋಡಿಸಿದರು. ಅಂಥ ಕೇರಳದವರು ಅವರು ಈಗ ನಮಗೆ ಕಾಸರಗೋಡು ಬೇಕಾಗಿದೆ ಎಂದು ಹೇಳತಕ್ಕಂಥಾದ್ದು ಮಹಾ ತಪ್ಪು. ನಮ್ಮ ದೇಶ ಕರ್ನಾಟಕ ದೇಶದ ಗಡಿ ಆ ಕಡೆ ಷೋಲಾಪುರದವರೆಗೂ ಈ ಕಡೆ ದಿಂಡಿಗಲ್‌ದವರೆಗೂ ಇದ್ದುದನ್ನು ಈಗ ಬಹಳ ಚಿಕ್ಕದೇಶವನ್ನಾಗಿ ಮಾಡುತ್ತಾ ಬಂದಿದ್ದಾರೆ. 2-3 ಕೋಟಿ ರೂಪಾಯಿಗಳ ಉತ್ಪತ್ತಿಯಿರುವ ಸಿಪ್ಪೇಣಿಯನ್ನು ಮಹಾಜನ್ ವರದಿಯಲ್ಲಿ ಮಹಾ

ರಾಷ್ಟ್ರಕ್ಕೆ ಸೇರಿಸಲು ಸಲಹೆಮಾಡಿದ್ದಾರೆ, ಮಹಾರಾಷ್ಟ್ರದವರಿಗೆ ಅದು ಬೇಕಾಗಿತ್ತು. ಹೀಗೆ ಮಾಡಿ ಹೊಗೆಸೊಪ್ಪು ಸುಣ್ಣ ಚೆನ್ನಾಗಿ ಉಜ್ಜಿ ಬಾಯಲ್ಲಿ ಹಾಕಿಕೊಂಡು ನಿಷಾ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದಾರೆ. ಅದರಿಂದ ನಮಗೆ ಬರುತ್ತಿದ್ದ ಬಹಳ ಆದಾಯ ಹೋದರೂ ಕೂಡ ನಮ್ಮವರು ಮಹಾಜನ್ ವರದಿಯನ್ನು ಒಪ್ಪಿ ಕೊಂಡಿದ್ದಾರೆ. ಆದರೆ ಮಹಾರಾಷ್ಟ್ರದವರು ತಾವು ವರದಿಯನ್ನು ಒಪ್ಪುವುದಿಲ್ಲವೆಂದು ಹೇಳುತ್ತಿದ್ದಾರೆ. ಮಹಾರಾಷ್ಟ್ರದವರು ಮರಾಠಿ ಮಾತನಾಡುವವರಿರುವ ಭಾಗಗಳೆಲ್ಲ ತಮ್ಮದು, ಅವನ್ನು ಪಡೆದುಕೊಳ್ಳಲು ಏನು ಬೇಕಾದರೂ ಮಾಡಲು ಸಿದ್ಧ ಎಂದು ಹೇಳಬಹುದು. ಕರ್ಣಾಟಕದವರು ನ್ಯಾಯವಾಗಿ ತಮಗೆ ಬರಬೇಕಾದುದನ್ನು ಪಡೆಯಲು ಹೋರಾಟ ನಡೆಸಲು ಸಿದ್ಧರಿದ್ದಾರೆ. ಆದರೆ ನಮ್ಮ ಮುಂದಿರುವ ವರದಿಗೆ ಮನ್ನಣೆ ಕೊಡಬೇಕಾಗಿದೆ. ಕರ್ಣಾಟಕ ದೇಶ ಎಲ್ಲಿಯವರೆಗಿತ್ತೆಂಬುದನ್ನು ಹಿಂದಿನ ಚರಿತ್ರೆಯಲ್ಲಿ ನೋಡಬಹುದು. ಇಂದು ವಿರೋಧ ಪಕ್ಷದವರೂ ಮತ್ತು ನಮ್ಮವರೂ ಕರ್ಣಾಟಕಕ್ಕೆ ಸೇರಬೇಕಾದ ಊರುಗಳನ್ನು ಏಕಕಂಠದಿಂದ ತಿಳಿಸಿದ್ದಾರೆ. ಮಹಾರಾಷ್ಟ್ರದವರು ಮಾತ್ರ ಏನೇ ಹೇಳಿದರೂ ಅದು ನ್ಯಾಯಬದ್ಧವಾಗಿದ್ದರೂ ಒಪ್ಪುವುದಿಲ್ಲ. ಮಹಾರಾಷ್ಟ್ರ ದವರು ಕೇಂದ್ರ ಸರಕಾರದಲ್ಲಿ ಗೃಹ ಸಚಿವರಾಗಿ ತಮ್ಮವರೇ ಇದ್ದಾರೆ, ಆದುದರಿಂದ ತಮಗೆ ಬೇಕಾದಂತೆ ಮಾಡಬಹುದು ಎಂದು ತಿಳಿದುಕೊಂಡಿರಬಹುದು. ಆದರೆ ನಮ್ಮ ಕರ್ಣಾಟಕದ ಜನರ ಮುಂದೆ ಅವರ ಆಟ ನಡೆಯುವುದಿಲ್ಲ. ಅವರು ಬಹಳ ಹುಷಾರಾಗಿರಬೇಕು. ಇಂದು ಭಾಷಾವಾರು ಪ್ರಾಂತಗಳ ರಚನೆಯಿಂದಾಗುತ್ತಿರುವ ಗೊಂದಲವನ್ನು ನೋಡಿದರೆ ಅದು ಮಾಡುವುದಕ್ಕೆ ಬದಲಾಗಿ ನಾಲ್ಕು ಜೋನುಗಳನ್ನು ಎ, ಬಿ, ಸಿ, ಡಿ ಎಂದು ನಿರ್ಮಾಣ ಮಾಡಿದ್ದರೆ ಚೆನ್ನಾಗಿತ್ತು ಎಂದು ತೋರುತ್ತದೆ. ಹಾಗೆ ಮಾಡಿದರೆ ಜನಾಂಗದ ಪ್ರಶ್ನೆ ಇರುವುದಿಲ್ಲ. ಕರ್ಣಾಟಕದ ಜನರನ್ನು ಕೆರಳಿಸದೆ ಮಹಾಜನರ ತೀರ್ಪೇ ಕಡೆಯ ತೀರ್ಪು ಎಂದು ಮಹಾರಾಷ್ಟ್ರದವರು ಒಪ್ಪಬೇಕು. ಬೆಳಗಾವಿ ಮತ್ತು ಕಾರವಾರ ತಮಗೆ ಸೇರುವವರೆಗೆ ಪಾರ್ಲಿಮೆಂಟ್ ಆಗಲಿ ಇತರ ಸಂಸ್ಥೆಗಳಾಗಲಿ ಒಪ್ಪುವುದಿಲ್ಲವೆಂದು ಮಹಾರಾಷ್ಟ್ರದವರು ಹೇಳುತ್ತಿದ್ದಾರೆ. ಇದಕ್ಕೆ ನಮ್ಮ 27 ಮಂದಿ ಪಾರ್ಲಿಮೆಂಟ್ ಸದಸ್ಯರು ಮತ್ತು ಕರ್ಣಾಟಕದ ವಿಧಾನಸಭಾ ಸದಸ್ಯರು ಚವಾಣ್‌ರವರಿಗೆ ಪಾಠ ಕಲಿಸಬೇಕಾಗಿದೆ. ಇದಕ್ಕಾಗಿ ಯಾವತ್ಯಾಗ ಬೇಕಾದರೂ ಮಾಡುವುದಕ್ಕೆ ಸಿದ್ಧ ಎಂದು ನಮ್ಮವರು ಹೇಳಬೇಕಾಗಿದೆ. ಮಹಾರಾಷ್ಟ್ರವನ್ನು ಆ ಹೆಸರಿನಿಂದ ಕರೆಯಬಾರದು, ಅದೂ ಕೂಡ ಇಂಡಿಯಾದೇಶಕ್ಕೆ ಸೇರಿದೆ, ಅದನ್ನು ಮರಾಠಿ ದೇಶ ಎಂದು ಕರೆಯಬೇಕು. ನಮ್ಮ ದೇಶವನ್ನು ಕಾಪಾಡಕೊಳ್ಳಲು ನಮಗೆ ಶಕ್ತಿಯಿದೆ. ಕರ್ಣಾಟಕದವರಮೇಲೆ ಬಹಳ ಗಲಾಟೆಮಾಡುತ್ತಿದ್ದಾರೆ. ಇನ್ನು ಕೆಲವು ಭಾಗಗಳು ತಮಗೆ ಸೇರಬೇಕೆಂದು ಒತ್ತಾಯ ಮಾಡುತ್ತಿದ್ದಾರೆ. ಆದರೆ ಇದಕ್ಕೆ ಕೊನೆಮೊದಲಲ್ಲ. ಅಲ್ಲದೆ ಮಹಾಜನ್‌ರವರ ತೀರ್ಪು ಬಹಳ ಶ್ರೇಷ್ಠವಾಗಿದೆ. ಆದುದರಿಂದ ಮಹಾರಾಷ್ಟ್ರದವರೂ ಮತ್ತು ನಮ್ಮವರೂ ಅದನ್ನು ಒಪ್ಪಿಕೊಂಡು ಜಗಳಕ್ಕೆ ಅವಕಾಶ ಇಲ್ಲದಂತೆಮಾಡಬೇಕು, ನಮ್ಮ ಮುಂದಿರುವ ವರದಿಗೆ ಮನ್ನಣೆ ಕೊಡಬೇಕಾದ್ದು ನಮ್ಮ ಕರ್ತವ್ಯವಾಗಿದೆ ಎಂದು ಇಷ್ಟು ಹೇಳಿ ಸಭಾಧ್ಯಕ್ಷರು ಮಾತನಾಡಲು ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸುತ್ತೇನೆ.

† **Sri N. B. SIRDESAI** (Khanapur).—Sir, I rise to oppose the motion and the proposal of implementing the Mahajan Commission Report. At the outset I would like to bring to the notice of this House that we have no animosity against the Kannada people nor are we hating their Kannada language. On going through the Report, I have come to the conclusion that the Report is anti-national and dispute creating. Again, on going into the details of the Report, I am inclined to call it as a 'black report', because it is unprincipled, inconsistent and full of complications and blunders. If it is implemented, as it is, both Kannada and Marathi people will be inconvenienced, they will not get justice and there will be no end to agitations If at all the Government wants to put an end to this agitation, this must be solved on equitable and scientific principles. Our Kannada brothers and sisters in Mysore State, and the Government of Mysore, are insisting upon the implementation of this Report, because they have got much more than what they had expected and what they really deserve to have.

(SRI N. B. SIRDESAI)

On going through the pamphlet published by the Government of Mysore, from the Press reports and from the information available from the Report of Sri Mahajan, I think, it is true, that a high-power delegation headed by the M. P. C. C. President—of course, all the Congressmen had met the Prime Minister of India, the All-India Congress President and the Union Home Minister, and had urged upon them to appoint a Commission and put an end to this longstanding problem. Sir, they had further requested that the Congress Working Committee should fix up terms of reference for this Commission. Unfortunately, the Congress Working Committee did not settle the terms of reference for this Commission and the Commission was let loose to have its own views according to its own whims. It did not base its conclusions on any well defined principles. While accepting the appointment of the Commission, the Maharashtra Government accepted it on clear understanding and assumption that the Congress Working Committee would fix up the terms of reference for the Commission and the Commission would base its conclusions on some scientific and equitable principles. But the Commission seems to have neither taken into consideration the wishes of the people nor it assessed the facts. Now the Maharastra Government is rejecting the report. It is not only that the Maharastra Government is rejecting, but we the poor people are also rejecting this report. We urged the Maharastra Government to plead for our cause and see that our area is merged in the Maharastra State. The Commission has adopted a different stand and that is why it has not come to the proper conclusion and has not given a proper decision. The Commission has made unjust remarks as regards the Konkani language- Mr. Kadam has said much about Konkani. I would like to speak a few words about this. The States Reorganisation Committee has stated that Konkani has more affinity towards Marathi even though it has no script of its own.

SrI S. R. KANTHI.—You have adopted script from Sanskrit and the same has been adopted by these Konkani people.

SrI N. B. SIRDESAI.—This has been spread by Marathi and not by Sanskrit. Mr. Mahajan wanted to cut off the contiguity of these areas. The Commission is not prepared to call the dialect of Konkani as the dialect of Marathi. If it is not a dialect from Marathi there would have been no contiguity from Marathi Taluks. But still he wants to say that Konkani is not a dialect of Marathi. Konkani is not akin to Kannada language and really speaking the Commission should not have retained the Supa and Haliyal Taluks in Mysore State. As regards Shiva Sena what business has he got to mention about this? This shows his partial attitude towards the Mysore State. It is not a political organisation and it has no concern with this issue. He could have mentioned about other Senas in the Mysore State. There are several Senas in Mysore and other States. He is partial towards Mysore. He has advised the M.E.S. people to take up educational

activities. He has ignored the fact that our M.E.S. has already taken up educational activities and they are running some High Schools. He has advised us to take up educational activities now. He has not advised the Mysoreans to take up such activities. This shows he is partial to Mysoreans He has further said that the Maharastrians are expansionists and they want to grab more and more lands. Really speaking they are not expansionists. They are content with what they are having. But they are putting forth their claims on legitimate lands which should have belonged to them naturally. The popular wish of the people of border areas is that their areas should be annexed to Maharastra. I tell you that the Maharastra State is not taking villages from Mysore State. On the other hand, they have proposed to merge some villages into Mysore from Maharastra. That shows they are not expansionists. On the contrary, Mysore is seeking some areas, villages and towns over which it has no legitimate claim even legally, culturally, linguistically and economically also. Therefore Mysoreans can very well be called expansionists. The Mysore's claim is unjustifiable and exorbitant.

Now Mysore is contending that it is losing rich areas of Nippani and thereby it is losing an annual income of Rs. 3 crores. Nippani does not belong to Mysore and again it is contending that it is losing Khanapur Taluk. The Khanapur Taluk is cent per cent Marathi speaking area. The Mysore Government is saying that they are going to lose the rich forest area here. The other day one Hon'ble member was telling that the Mysore Government has spent much over Khanapur Taluk and especially for irrigation the Government has spent lakhs of rupees. Let me tell you that Mysore is getting over Rs.40 lakhs from forest revenue and Rs. 10 lakhs from other revenues. But the Mysore Government has not spent even 2 per cent out of the total revenue that it has got from our Taluka. Khanapur Taluk is purely Marathi area. Therefore, Mysore has no claim over Khanapur Taluk. Again Sir, at page 14, para 28 of the book published by Mysore Government it is stated "After all whether a village or a town is located in one State or the other, it will remain within India". If it is so why don't you give up your claim over Marathi area ? Publicly they say they don't want any areas, and they are not avericious. But internally they are not like that. If it is the contention of Mysore why it is fighting for the utilisation of Krishna-Godavari water ? If they are really selfless people, they should give up claim over these waters.

Then Sir, about nationalism. My friends here gave lectures about nationalism and fraternity. Sir, we know far better what is nationalism and national integrity. During my regime as a Taluk Board President, probably I was the first Taluk Board President in the whole of the State to contribute the whole of my honorarium to the National defence fund which was utilised during Chinese and Pakistan aggression for useful purposes. Our border people have contributed much towards the national defence fund. We have strained every nerve for strengthening the hands of our Prime Minister. So Sir, we know far better what is national integration or fraternity.

(SRI N. B. SIRDESAI)

6-30 P.M.

Then Sir, 54 villages have been retained in Mysore and these villages come under the jurisdiction of 8 panchayats and they are purely Marathi part. Time and again they have passed resolutions for the merger of all the villages into Maharashtra. In spite of this 50 villages along with the various areas have been retained in Mysore without any basis. These 50 villages have got contiguity. 150 villages which have been merged with Maharashtra and which have contiguity from Haliyal and Supa taluks from Khanapur and in order to strengthen their claim over Goa for Mysore, they have retained 54 villages in Mysore State and what natural barriers Mr. Mahajan could see I wonder because these 152 villages are purely Marathi speaking.

Mr. DEPUTY SPEAKER.—Please conclude.

Sri N. B. SIRDESAI.—Then the Commission have falsely stated that 13 villages east of Khanapur railway line are Kannada villages. It is not correct. All the villages east of Khanapur railway are situated ten miles beyond Khanapur and 10 miles beyond Nandagad. So it is a false statement given by Mr. Mahajan. At page 44 para 142, the statement made by the Mysore Government is quite incorrect and baseless and the statement made by Maharashtra was quite correct. The Maharashtra Government has said that all the village officers and police patels and vatandars in Khanapur taluk are Maharashtrians. The Mysore Government stated to the contrary; they have said that in the whole district, there are five DESAI families. Even in Khanapur taluk, there are six DESAI families and I belong to one of them. They are Marathi-speaking families and from time immemorial they are residing in those areas as Marathi speaking families. By making such false statements, they are claiming Marathi areas without any historical or cultural ties. In the name of the welfare and democratic State, why Mysore should force them to remain in Mysore is a wonder, because Marathi cannot claim Kannada heritage, Marathi people cannot claim Kannada culture. We are proud of calling ourselves as Marathi. If the Congress Government has any faith in democracy, they should not force any set of people to remain in a particular State against the wishes of the people. I am very sorry, in making speeches here some Members are making bad remarks and calling bad names and uttering unholy words against the national leaders like Yeswanthrao Chavan and the Opposition Leader and a well-known journalist in Bombay. He has been called bad names. I remember to have read that one of my friends had published a statement that CHAVAN and DHULOP are just like pigmies. Sir, by decrying big people so big in stature, these people will be lowering themselves down to the category lower than pigmies.

As regards Bhalki and Akkalkot and merger of Khanapur Taluk into Maharashtra, the Mahajan Commission has applied different

standards. About linguistic homogeneity, he has applied different standards, and he says about administrative convenience. Of course I am very sorry to note that he has attached much importance to administrative convenience. Administrative convenience can be created and economic uplift can be brought about by industrialisation and by increasing the production. But love for language is a born instinct. It cannot be created. That is why no force should be applied to remain in a particular State against the wishes of the people. About 150 villages from Khanapur have been recommended for merger with Maharashtra in the Mahajan Commission Report.

While concluding, I would like to say that the *status quo* should not be maintained and also the Report of the Commission should not be implemented. This problem should be decided on well-defined, equitable and scientific principles. I strongly oppose its implementation.

†ಶ್ರೀ ಬಿ. ಎಂ. ಇದಿನಬ್ಬ (ಮಂಗಳೂರು-2).—ಮಾನ್ಯ ಅಧ್ಯಕ್ಷರೇ, ಈ ದಿವಸ ಮಹಾಜನ ಸಮಿತಿ ವರದಿಯನ್ನು ಪ್ರಸ್ತಾಪಿಸುವ ಕಾಲಕ್ಕೆ ಇಂದು ಅವರು ಇಲ್ಲ. ಅವರು ಎಂತಹ ದೂರ ದೃಷ್ಟಿಯಿಂದ ಎಂಥಹ ಮೇಧಾವಿಗಳಾಗಿ ಹಾಗೂ ನ್ಯಾಯಾಧೀಶರಾಗಿ ಎಷ್ಟು ನಿಷ್ಪಕ್ಷವಾದ ದೃಷ್ಟಿಯಿಂದ ಕೆಲಸ ಮಾಡಿದರು ಎನ್ನುವುದು ಅವರು ಕೊಟ್ಟಿರುವ ಈ ವರದಿಯನ್ನು ಓದಿದರೆ ಸಂಪೂರ್ಣವಾಗಿ ಎಲ್ಲರಿಗೂ ಅರ್ಥವಾಗುತ್ತದೆ. ಅವರು ಯಾವ ಪಕ್ಷಕ್ಕೂ ಸೇರದಂತೆ ನಮ್ಮ ದೇಶ ಯಾವ ರೀತಿಯಾಗಿ ಒಗ್ಗಟ್ಟಿನಿಂದ ಐಕಮತ್ಯದಿಂದ ಇರಬೇಕು ಎನ್ನುವುದಕ್ಕೆ ಅವರು ಭಾಷಾವಾರು ರಾಜ್ಯಗಳ ತತ್ವವನ್ನೂ ಇದರಲ್ಲಿ ಹೇಳಿದ್ದಾರೆ. ಭಾಷಾವಾರು ರಾಜ್ಯಗಳು ಇದ್ದರೆ ಜನತೆಯು ಆಶೋತ್ತರಗಳನ್ನು ತ್ವರಿತವಾಗಿ ಸಾಧಿಸಲು ಸಾಧ್ಯವಾಗುತ್ತದೆ ಎಂದು ಎಲ್ಲ ರಾಜ್ಯಗಳೂ ಆಯಾ ಭಾಷೆಯಾಡುವ ಜನರ ಅನುಕೂಲಕ್ಕಾಗಿ ಆಗಬೇಕೆಂದು ಒತ್ತಾಯ ಬರುತ್ತಿತ್ತು. ಇದೇ ರೀತಿಯಲ್ಲಿ ಆಂಧ್ರದಲ್ಲಿ ಬಹಳ ಬಲವಾದ ಹಿಂಸಾಕೃತ್ಯಗಳಾದವು ಮತ್ತು ಇತರ ಗೊಂದಲಗಳಾದವು ಮತ್ತು ಬಹಳಗಲಭೆಗಳಾಗಿ ಕೊನೆಗೆ ಆಂಧ್ರದಲ್ಲಿ ಮಹಾನಾಯಕರಾಗಿದ್ದ ಶ್ರೀಮಾನ್ ಪೊಟ್ಟಿ ಶ್ರೀರಾಮುಲುರವರು ಪ್ರಾಣಾರ್ಪಣೆ ಮಾಡಿದ ಮೇಲೆ ಆಂಧ್ರ ಪ್ರಾಂತವಾಯಿತು ಅದೇ ರೀತಿ ಮಹಾರಾಷ್ಟ್ರ ಪ್ರಾಂತವಾಯಿತು. ಅದೇ ರೀತಿ ನಮ್ಮ ಕನ್ನಡರಾಜ್ಯವಾಗಬೇಕು ಎಂದು ನಮ್ಮ ಕನ್ನಡಿಗರು ಕೇಂದ್ರ ಸರಕಾರದ ಮೇಲೆ ಮೇಲಿಂದ ಮೇಲೆ ಒತ್ತಾಯ ತರುತ್ತಲೇ ಇದ್ದರು ಮತ್ತು ಆಗ ನಮ್ಮ ಪ್ರಧಾನ ಮಂತ್ರಿಗಳಾಗಿದ್ದ ಶ್ರೀ ಜವಹರಲಾಲನೆಹರೂರವರು ಭಾಷವಾರು ರಾಜ್ಯವಾಗಬೇಕು ಎನ್ನುವ ತತ್ವವನ್ನು ಪ್ರತಿಯೊಬ್ಬರೂ ಒಪ್ಪಬೇಕು ಎಂದು ಮೊದಲಿಂದಲೂ ಹೇಳುತ್ತಲೇ ಬರುತ್ತಿದ್ದರು. ಭಾಷೆಗಳ ಮೂಲಕ ಘಟಕಗಳನ್ನು ಮಾಡಬೇಕೆಂದು ಫಜಲಾಲಿ ಕಮಿಷನ್ ಎನ್ನುವುದು ನೇಮಕವಾಯಿತು. ಈ ಫಜಲಾಲಿ ಕಮಿಷನ್ನಿನವರು ಇಡೀ ಭಾರತ ದೇಶವನ್ನೆಲ್ಲಾ ಸುತ್ತಿ ಒಂದು ವರದಿಯನ್ನು ಕೇಂದ್ರ ಸರಕಾರಕ್ಕೆ ಕೊಟ್ಟರು. ಇದರಲ್ಲಿ ಕೆಲವು ಗಣ್ಯ ವ್ಯಕ್ತಿಗಳೂ ಇದ್ದರು, ಎಂದರೆ, ನಮ್ಮ ಕೇರಳ ಭಾಗಕ್ಕೆ ಸೇರಿದ ಶ್ರೀ ಪಣಿಕ್ಕರ್‌ರವರೂ ಇದರ ಸದಸ್ಯರಾಗಿದ್ದರು. ಇದರ ಬಗ್ಗೆ ಹೆಚ್ಚಾಗಿ ಹೇಳುವುದಕ್ಕೆ ಬದಲಾಗಿ ನಾನು ಕಾಸರಗೋಡಿನ ಬಗ್ಗೆ ಇಲ್ಲಿ ಸ್ವಲ್ಪ ಹೆಚ್ಚಾಗಿ ಹೇಳಲು ಇಚ್ಛಿಸುತ್ತೇನೆ. ಫಜಲಾಲಿ ಕಮಿಷನ್ನಿನವರು ಮಂಗಳೂರಿಗೆ ಬಂದಿದ್ದಾಗ ಫಜಲಾಲಿಯವರ ಜೊತೆಗೆ ಸದಸ್ಯರಾಗಿದ್ದ ಶ್ರೀ ಪಣಿಕ್ಕರ್‌ರವರೂ ಕೂಡ ಅಲ್ಲಿಗೆ ಆಗ ಬಂದಿದ್ದರು. ಮಂಗಳೂರಿನಲ್ಲಿ ಎಲ್ಲ ಜನರಿಂದಲೂ ಸಾಕ್ಷ್ಯಗಳನ್ನು ತೆಗೆದುಕೊಳ್ಳುವ ಕಾಲದಲ್ಲಿ ಎಲ್ಲ ಗಣ್ಯ ವ್ಯಕ್ತಿಗಳೂ ಹಾಗೂ ಇತರ ಖಾಸಗಿ ಜನರೂ ಕೂಡ ಕಾಸರಗೋಡನ್ನು ಕರ್ಣಾಟಕದಲ್ಲೇ ಇರುವಂತೆ ಮಾಡಬೇಕೆಂದು ಒತ್ತಾಯವಾಗಿ ಹೇಳಿದರು, ಬೊಬ್ಬೆ ಇಟ್ಟರು. ಎಷ್ಟು ವಿಧವಾಗಿ ಒತ್ತಾಯ ಮಾಡಿ ಬೊಬ್ಬೆ ಇಟ್ಟರೂ ಕೂಡ ಫಲವಾಗಲಿಲ್ಲ. ಈ ಸಮಿತಿಯಲ್ಲಿದ್ದ ಸದಸ್ಯರಾದ ಪಣಿಕ್ಕರ್‌ರವರು ಕೇರಳಕ್ಕೆ ಸೇರಿದವರು ಎನ್ನುವುದು ಪ್ರತಿಯೊಬ್ಬರಿಗೂ ಗೊತ್ತು. ಇವರಿಂದ ಯಾರಿಗೂ ಸರಿಯಾದ ನ್ಯಾಯ ದೊರೆಯುವುದಿಲ್ಲ ಎಂತಲೇ ಇತ್ತು. ಕಾಸರಗೋಡು ಕರ್ಣಾಟಕಕ್ಕೆ ಸೇರಿದ ಭಾಗ ಎನ್ನುವುದು ಪ್ರತಿಯೊಬ್ಬರಿಗೂ ಗೊತ್ತು. ಆದರೂ ಕೂಡ ಪಣಿಕ್ಕರ್‌ರವರು ಮಾಡಿದ ಕುತಂತ್ರದ ಫಲವಾಗಿ ಕಾಸರಗೋಡು ಕೇರಳದಲ್ಲೇ ಇರಬೇಕು ಎಂದು ವರದಿಯಲ್ಲಿ ಆಗ ಮಾಡಿದುದರಿಂದ ಕಾಸರಗೋಡು ಇನ್ನೂ ಕೇರಳದಲ್ಲೇ ಇರುವಂತಾಗಿದೆ. ಕಾಸರಗೋಡಿನ ಜನತೆ ಎಷ್ಟು ವಿಧವಾಗಿ ಬೊಬ್ಬೆ ಇಟ್ಟರೂ ಏನೂ ಪ್ರಯೋಜನವಾಗಲಿಲ್ಲ. ಕಾಸರಗೋಡಿನ ಜನ ಕರ್ಣಾಟಕಕ್ಕೆ

(ಶ್ರೀ ಬಿ. ಎಂ. ಇದಿನಬ್ಬ)

ಸೇರಬೇಕೆಂದು ಬಹು ದಿನಗಳಿಂದಲೂ ಕೂರಗುತ್ತಲೇ ಇದ್ದಾರೆ. ಭೌಗೋಲಿಕವಾಗಿ, ಸಾಂಸ್ಕೃತಿಕವಾಗಿ ಹಾಗೂ ಇನ್ನು ಯಾವ ದೃಷ್ಟಿಯಿಂದಲೇ ಆಗಲಿ ನೋಡಿದರೂ ಕಾಸರಗೋಡು ಕೇರಳದಲ್ಲಿ ಉಳಿಯಲು ಸಾಧ್ಯವಿಲ್ಲ. ಹಾಗಿದ್ದರೂ ಸುಮಾರು ಹತ್ತು ವರ್ಷಗಳಿಂದಲೂ ಸತತವಾಗಿ ಇಲ್ಲಿನ ಜನರು ಹೋರಾಟವನ್ನು ಶಾಂತಿಯಿಂದ ನಡೆಸುತ್ತಲೇ ಬರುತ್ತಿದ್ದಾರೆ. ಸರಕಾರದ ಲಕ್ಷ್ಯಕ್ಕೆ ಇದನ್ನು ತರುತ್ತಿದ್ದರೂ ಇನ್ನೂ ಕಾಸರಗೋಡಿನ ಜನತೆಗೆ ಅನುಕೂಲವಾಗಲಿಲ್ಲ. ಇವರುಗಳು ಜಾಥಾ ಕೊಂಡೊಯ್ದರು ಹಾಗೂ ಸತ್ಯಾಗ್ರಹಗಳನ್ನು ಮಾಡಿದರು ಹಾಗೂ ಬೇರೆ ಬೇರೆ ನಾಯಕರುಗಳನ್ನು ಕಂಡು ತಮ್ಮ ನಿಲುವನ್ನು ವಿಶದಪಡಿಸಿ ಸ್ಪಷ್ಟವಾಗಿ ಹೇಳಿದರೂ ಏನೂ ಪ್ರಯೋಜನವಾಗಲಿಲ್ಲ. ನಮ್ಮ ಕಾಸರಗೋಡಿನ ಜನರು ಹಿಂಸೆಗೆ ಅವಕಾಶ ಕೊಡಬಾರದು ಎಂದು ಶಾಂತಿಯಿಂದ ತಮ್ಮ ಚಳುವಳಿಯನ್ನು ಮುಂದುವರಿಸುತ್ತಲೇ ಬರುತ್ತಿದ್ದಾರೆ. ನಮ್ಮ ಜನ ಯಾವಾಗಲೂ ಸತ್ಯ ಧರ್ಮಕ್ಕೆ ಬೆಲೆಯನ್ನು ಕೊಡುವವರು. ಎಂದಿದ್ದರೂ ಸತ್ಯಕ್ಕೇ ಜಯ, ಧರ್ಮಕ್ಕೇ ಜಯ ಎಂದು ನಂಬಿಕೊಂಡು ಇನ್ನೂ ಹೋರಾಟ ನಡೆಸುತ್ತಲೇ ಬರುತ್ತಿದ್ದಾರೆ. ನಮ್ಮ ಕಾಸರಗೋಡು ಅನಾದಿ ಕಾಲದಿಂದಲೂ ಕರ್ಣಾಟಕಕ್ಕೆ ಸೇರಿದ ಭಾಗವೇ. ಅದರಲ್ಲೂ ಯಕ್ಷಗಾನಕ್ಕೆ ಪ್ರಸಿದ್ಧಿಯಾದ ಕುಂಬಳೆ ಪಾರ್ಥ ಸುಬ್ಬಯ್ಯ ಭಾಗವತರು ನಮ್ಮ ಕಾಸರಗೋಡಿಗೆ ಸೇರಿದವರೇ, ಹಾಗೂ ಈಚೆಗೆ ಬಹುಮಾನಿತರಾದ ರಾಷ್ಟ್ರಕವಿ ಮಂಜೇಶ್ವರ ಗೋವಿಂದ ಪೈ ಕೂಡ ಅಚ್ಚ ಕನ್ನಡಿಗರು ಮತ್ತು ಕಾಸರಗೋಡು ಕರ್ಣಾಟಕದಲ್ಲೇ ಇರಬೇಕು ಎಂದು ಮೊದಲಿನಿಂದಲೂ ಹೇಳುತ್ತಲೇ ಬರುತ್ತಿದ್ದರು ಮತ್ತು ಯಾವ ರೀತಿಯಿಂದ ನೋಡಿದರೂ ಕಾಸರಗೋಡು ಮಂಗಳೂರು ದಕ್ಷಿಣ ಕನ್ನಡ ಜಿಲ್ಲೆಗೆ ಹೊಂದಿಕೊಂಡಂತೆ ಇರುವುದರಿಂದ ಇದು ಅಚ್ಚ ಕನ್ನಡ ಪ್ರದೇಶ ಎನ್ನುವುದು ಎಲ್ಲರಿಗೂ ತಿಳಿದಿರುವ ವಿಚಾರ. ಇಲ್ಲಿ ನೂರಕ್ಕೆ ನೂರು ಭಾಗ ಜನರು ಕನ್ನಡ ಮಾತಾಡುವವರೇ ಇರುವವರು ಮತ್ತು ನಮ್ಮ ರಾಷ್ಟ್ರದ ಉತ್ತಮ ಕವಿಗಳಾದ ಶ್ರೀಮಾನ್ ಕೈಯ್ಯಾರ ಕಿಞ್ಞಣ್ಣರಯ್‌ವರು ಕಾಸರಗೋಡು ಕರ್ಣಾಟಕಕ್ಕೆ ಸೇರಿದ ಭಾಗ ಎನ್ನುವುದನ್ನು ಅವರು ತಮ್ಮ ಕವಿತೆಗಳಲ್ಲೂ ಹೇಳಿದ್ದಾರೆ. ಇದು ಯಾವ ಕಾಲಕ್ಕಾದರೂ ಕರ್ಣಾಟಕಕ್ಕೆ ಸೇರಿದ ಭಾಗಗಳೇ ಎಂದು ಅವರೂ ಹೇಳಿದ್ದಾರೆ. ಮತ್ತು ಕಾಸರಗೋಡಿನ ಎಲ್ಲ ಜನರೂ ಕರ್ಣಾಟಕಕ್ಕೆ ಸೇರಲು ಬಹಳ ಕಾತುರರಾಗಿದ್ದಾರೆ. ಆದರೆ ಮಹಾರಾಷ್ಟ್ರದವರು ಮಾಡುವ ಹಾಗೆ ಒತ್ತಾಯ ಮಾಡಿ ಯಾವ ರೀತಿ ಅನಾಹುತಗಳನ್ನು ಮಾಡುತ್ತಿದ್ದಾರೆ ಎನ್ನುವುದು ಎಲ್ಲರಿಗೂ ತಿಳಿದ ವಿಷಯಗಳೇ ಆಗಿವೆ. ನಮ್ಮಲ್ಲೂ ಕೂಡ ಹಿಂದೆ ಮಹಾಜನ್ ಕಮಿಷನ್ ನೇಮಕವಾಗುವುದಕ್ಕೆ ಮೊದಲು ಬೆಳಗಾಂ, ಕಾರವಾರ ಹಾಗೂ ನಿಪ್ಪಾಣಿ ಈ ಭಾಗಗಳಲ್ಲಿ ಬೇಕಾದಷ್ಟು ಚಳುವಳಿಗಳು ಹಾಗೂ ಆಂದೋಲನಗಳು ನಡೆದದ್ದು ಎಲ್ಲರಿಗೂ ತಿಳಿದ ವಿಚಾರವೇ ಆಗಿದೆ. ಆದರೆ ಈ ಮಹಾಜನ್ ಕಮೀಷನ್ನಿನವರ ವರದಿ ಬಂದ ಮೇಲೆ ನಮ್ಮ ಸಂಪದ್ಭರಿತವಾದ ಕೆಲವು ಪ್ರದೇಶಗಳು, ನಿಪ್ಪಾಣಿ ಇನ್ನಿತರ ಭಾಗಗಳು, ಮಹಾರಾಷ್ಟ್ರಕ್ಕೆ ಹೋಗಬೇಕೆಂದು ಇದರಲ್ಲಿ ಸೂಚಿಸಲಾಗಿದೆ. ಇದರಿಂದ ನಮಗೆ ಬರುವ ಆದಾಯ ಸುಮಾರು ಮೂರು ನಾಲ್ಕು ಲಕ್ಷ ರೂಪಾಯಿಗಳಷ್ಟು ಕಡಿಮೆಯಾಗುತ್ತದೆ. ಆದರೂ ಕರ್ಣಾಟಕದವರು ಮಹಾರಾಷ್ಟ್ರದವರು ಈಚೆಗೆ ಮಾಡುತ್ತಿರುವಂತೆ ಯಾವ ತರಹದ ಒತ್ತಾಯಗಳು ಹಾಗೂ ಚಳುವಳಿಗಳನ್ನು ಮಾಡುತ್ತಿಲ್ಲ. ಮೊದಲಿಗೆ ಕರ್ಣಾಟಕದವರು ಕಮಿಷನ್ ಮಾಡುವುದಕ್ಕೆ ಒಪ್ಪದೇ ಇದ್ದರು. ಮಹಾರಾಷ್ಟ್ರದವರು ಒತ್ತಾಯ ತಂದು ಸತ್ಯಾಗ್ರಹ ಮಾಡಿಸಿ ಮಹಾರಾಷ್ಟ್ರದ ನಾಯಕರಾಗಿದ್ದ ವೃದ್ಧರಾಗಿದ್ದ ಸೇನಾಪತಿ ಬಾಪಟ್‌ರವರು ಸಾಯಬಹುದು ಎನ್ನುವ ಒಂದು ನೆಪಹೂಡಿ ಒತ್ತಾಯದಿಂದ ಮಹಾಜನ್ ಕಮೀಷನ್‌ಮಾಡಬೇಕೆಂದು ಮಾಡಿಸಿದರು. ಇದಕ್ಕೆ ಮೊದಲು ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಒಪ್ಪದೇ ಇದ್ದರೂ ಕೊನೆಗೆ ಏನೋ ಮಾಡಿಸಿ ಒಪ್ಪಿಸಿದರು. ಅಲ್ಲದೆ ಆಗಲೇ ಮಹಾರಾಷ್ಟ್ರದವರು ಹಾಗೂ ಕರ್ಣಾಟಕದವರು ಈ ಕಮೀಷನ್ನಿನ ವರದಿಯನ್ನು ಪೂರ್ಣವಾಗಿ ಒಪ್ಪಲೇ ಬೇಕು ಎಂದೂ ಒಪ್ಪಿಕೊಂಡಿದ್ದರು. ಈಗ ಮಹಾಜನ್ ಕಮೀಷನ್ ವರದಿ ಬಂದ ಮೇಲೆ ಮಹಾರಾಷ್ಟ್ರದವರೇ ಮೊದಲಿಗೆ ಕಮೀಷನ್ನಿಗೆ ವಿರೋಧವಾಗಿ ವರ್ತಿಸುತ್ತಾ ಹೋಗುತ್ತಿರುವುದು ನೋಡಿ ನಮಗೆಲ್ಲಾ ಆಶ್ಚರ್ಯವಾಗುತ್ತಿದೆ. ಈ ಸಂದರ್ಭದಲ್ಲಿ ನಮ್ಮ ಕರ್ಣಾಟಕದ ಎಲ್ಲ ರಾಜಕೀಯ ಸದಸ್ಯರುಗಳೂ ಈ ಪಕ್ಷ ಆ ಪಕ್ಷ ಎನ್ನುವ ಭೇದ ಭಾವಗಳೊಂದೂ ಇಲ್ಲದಂತೆ ಕೇಂದ್ರದ ಮೇಲೆ ಅತಿ ಬುದ್ಧಿವಂತಿಕೆಯಿಂದ ಒತ್ತಾಯ ತರಬೇಕಾಗಿದೆ. ಆದರೆ ಮಹಾರಾಷ್ಟ್ರದವರು ಸತ್ಯಾಗ್ರಹ ಹೂಡಿ ಇಲ್ಲದ ಹಿಂಸಾಕೃತ್ಯಗಳನ್ನು ಈಗ ಮಾಡುತ್ತಿರುವುವನ್ನು ನೋಡಿದರೆ ಬಹಳ ಆಶ್ಚರ್ಯವಾಗುತ್ತಿದೆ. ರಾಜಕೀಯ ಪಕ್ಷಗಳೇ ಈ ರೀತಿಯಾಗಿ ಒತ್ತಾಯ ತಂದರೆ ಇದನ್ನು ಎಂದಿಗೂ ಒಪ್ಪತಕ್ಕುದಲ್ಲ ಇದನ್ನು ನಮ ಮಾನ್ಯ ನಾಯಕರಾದ ನಿಜಲಿಂಗಪ್ಪನವರೂ ಹಾಗೂ ಇತರ ರಾಜಕೀಯ ನಾಯಕರೂ ಇಂತಹ ಒತ್ತಾಯಗಳಿಗೆ ಮಣಿಯಬಾರದು ಎಂದು ನಾನು ಇಲ್ಲಿ ಕೇಳಿಕೊಳ್ಳುತ್ತೇನೆ. ಸೇನಾಪತಿ

ಬಾಪಟ್‌ರವರಂತಹವರು ಚಳುವಳಿ ಮಾಡಿದಂತೆ ನಮ್ಮ ದೇಶದಲ್ಲಿಯೂ ಚಳುವಳಿ ಮಾಡು ವವರು ಇದ್ದಾರೆ. ಕೇಂದ್ರದಲ್ಲಿರುವವರು ಮಹಾರಾಷ್ಟ್ರದವರೇ ಆಗಿರುವುದರಿಂದ ತಮ್ಮ ಹೇಳಿಕೆ ಗಳನ್ನು ಕೇಳುತ್ತಾರೆಂದು, ಈ ರೀತಿ ಬೆದರಿಕೆಗಳನ್ನು ಒತ್ತಾಯಗಳನ್ನು ತಂದರೆ ಒಪ್ಪಬಹುದು ಎಂದು ಮಹಾರಾಷ್ಟ್ರದವರು ತರುತ್ತಿದ್ದಾರೆ. ಒಂದು ವೇಳೆ ಕೇಂದ್ರದಲ್ಲಿನ ನಾಯಕರುಗಳು ಇದನ್ನು ಒಪ್ಪಿಕೊಂಡರೂ ಅದರಲ್ಲಿ ಆಶ್ಚರ್ಯವೇನಿಲ್ಲ. ನಿಜವಾಗಿಯೂ ಈ ವಿಚಾರದಲ್ಲಿ ಕೇಂದ್ರ ದವರು ಸರಿಯಾದ ತೀರ್ಮಾನವನ್ನು ತೆಗೆದುಕೊಳ್ಳಬೇಕಾದುದು ಅಗತ್ಯ. ಏಕೆಂದರೆ, ಹಿಂದೆ ಮಹಾರಾಷ್ಟ್ರದವರು ಗೋವಾದ ಬಗ್ಗೆ ಏನು ಮಾಡಿದರು ಎನ್ನುವುದು ಎಲ್ಲರಿಗೂ ತಿಳಿದ ವಿಷಯವೇ ಆಗಿದೆ. ಅಂತಹ ಒಂದು ಪರಿಸ್ಥಿತಿ ಇಂದು ನಮ್ಮ ದೇಶಕ್ಕೆ ಬಂದಿದೆ. ಇದು ಬಹಳ ದೊಡ್ಡ ವಿಷಯ. ಸುಮಾರು ಎರಡು ಲಕ್ಷ ಕನ್ನಡಿಗರು ಇರುವಂತಹ ಕಾಸರಗೋಡಿನ ಸಮಸ್ಯೆ ಸುಮಾರು ಹತ್ತು ವರ್ಷಗಳಿಂದ ಬರುತ್ತಲೇ ಇದೆ, ಮತ್ತು ಮಾನ್ಯ ನಿಜಲಿಂಗಪ್ಪನವರಿಗೆ ಎಲ್ಲ ರೀತಿಯಾದ ಒತ್ತಾಯಗಳನ್ನೂ ಇಲ್ಲಿ ತಂದು ಒತ್ತಾಯ ಮಾಡುತ್ತಿದ್ದಾರೆ. ಕರ್ಣಾಟಕ ಜನತೆಯ ಅಪೇಕ್ಷೆಯೂ ಕೂಡ ಕಾಸರಗೋಡನ್ನು ಕರ್ಣಾಟಕದಲ್ಲೇ ಉಳಿಸಬೇಕೆಂದೂ ಇದೆ. ಯಾವ ರೀತಿಯಿಂದಲೇ ನೋಡಲಿ. ಸತ್ಯ ಧರ್ಮ ನ್ಯಾಯ ರೀತಿಗಳಿಂದ ನೋಡಿದರೂ ಕಾಸರಗೋಡು ಕರ್ಣಾಟಕದಲ್ಲೇ ಇರಬೇಕು ಎನ್ನುವುದು ಎಲ್ಲರ ಅಭಿಪ್ರಾಯವೂ ಆಗಿದೆ. ಮಹಜನ್ ಕಮಿಷನ್ನಿನವರು ಕಾಸರಗೋಡು ವಿಭಾಗಕ್ಕೆ ಬಂದಾಗ ಇಲ್ಲಿರುವ ಎಲ್ಲ ರಾಜಕೀಯ ಧುರೀಣರು ಹಾಗೂ ಇತರ ವ್ಯಕ್ತಿಗಳು ಸಾಕಷ್ಟು ಆಧಾರಗಳನ್ನು ಕೊಟ್ಟು ಕಮಿಷನ್ನಿನವರಿಗೆ ಅವರ ಮೆಮೊರ್ಯಾಂಡಂನ್ನು ಕೂಡ ಕೊಟ್ಟಿತ್ತು. ಈ ಕಮಿಷನ್ನಿನವರು ಎಲ್ಲ ವಿಚಾರಗಳನ್ನೂ ಪರಿಶೀಲನೆ ಮಾಡಿ ಒಂದು ಒಳ್ಳೆಯ ತೀರ್ಪನ್ನು ಕೊಟ್ಟಿದ್ದಾರೆ. ಅವರು ಯಾರ ಒತ್ತಾಯಕ್ಕೂ ಬಲಿ ಬೀಳದೇ ನ್ಯಾಯ ದೃಷ್ಟಿಯಿಂದ ಅವರ ತೀರ್ಪನ್ನು ಕೊಟ್ಟಿದ್ದಾರೆ. ಇದರಿಂದ ಕೆಲವು ಭಾಗಗಳು ನಮ್ಮ ರಾಜ್ಯದಿಂದ ಅವರಿಗೆ ಹೋಗಬಹುದು ಅವರ ಕಡೆಯಿಂದ ನಮ್ಮ ಭಾಗಕ್ಕೆ ಕೆಲವು ಭಾಗಗಳು ಬರಬಹುದು. ಅವರೂ ಕೂಡ ಕಾಸರಗೋಡು ಕರ್ಣಾಟಕದಲ್ಲೇ ಇರುವುದು ಸಾಧುವಾದುದು ಎನ್ನುವ ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಇಂತಹ ವರದಿ ಹೇಗೇ ಇರಲಿ ನಮ್ಮ ನಾಯಕರು ಹೇಳಿದಂತೆ ಇನ್ನಾವ ಚಳುವಳಿಗಳಿಗೂ ಅವಕಾಶ ಕೊಡಬಾರದು ಮತ್ತು ಎಲ್ಲರೂ ಸಂಪೂರ್ಣವಾಗಿ ಈ ವರದಿಯನ್ನು ಒಪ್ಪಬೇಕು. ಇಲ್ಲದೇ ಇದ್ದರೆ ಇಲ್ಲದ ಕಷ್ಟಗಳಿಗೆ ಗುರಿಯಾಗಬೇಕಾಗಬಹುದು. ಇದರಿಂದ ಸಲ್ಪ ಹೆಚ್ಚುಕಡಿಮೆಯಾಗಬಹುದು. ಆದರೂ ದೇಶದ ಒಗ್ಗಟ್ಟಿನ ಹಿತದೃಷ್ಟಿಯಿಂದ ಮಹಜನ್‌ರವರು ಮಹಾರಾಷ್ಟ್ರವಾದಿಗಳಾಗಿ ಅಥವಾ ಕರ್ಣಾಟಕದ ವಾದಿಗಳಾಗಿ ಅವರು ತೀರ್ಪು ಕೊಟ್ಟಿಲ್ಲ. ಅಲ್ಲದೆ ಮಹಾಜನ್‌ರವರು ಮಹಾರಾಷ್ಟ್ರದವರೂ ಅಲ್ಲ ಕರ್ನಾಟಕದವರೂ ಅಲ್ಲ. ಪಂಜಾಬಿಗೆ ಸೇರಿದಂತಹವರು ಹಾಗೂ ಉನ್ನತ ನ್ಯಾಯಾಲಯದ ಶ್ರೇಷ್ಠ ನ್ಯಾಯಾಧೀಶರಾಗಿದ್ದಂತಹವರು. ಇಂತಹವರು ಕೊಟ್ಟಿರುವ ತೀರ್ಪನ್ನು ಯಾವುದೇ ತಾರತಮ್ಯಗಳನ್ನು ತಾರದೇ ಎಲ್ಲರೂ ಇದನ್ನು ಸಂಪೂರ್ಣವಾಗಿ ಒಪ್ಪಲೇ ಬೇಕು. ಮಹಾರಾಷ್ಟ್ರ ದವರಿಗೆ ಈ ವರದಿ ಅನುಕೂಲವಾಗಿ ಇಲ್ಲ ಎನ್ನುವ ನೆಪದಿಂದ ಮಹಜನ್‌ರವರು ಅವರ ತೀರ್ಮಾನವನ್ನು ಬರೆದಿಲ್ಲ. ಅವರು ಎಲ್ಲ ಸಾಧ್ಯವಾಗಲಿಲ್ಲವೋ ಅಂತಹ ಕಡೆಗಳಲ್ಲಿ ಹೋಗಿ ಎಲ್ಲ ಪರಿಸ್ಥಿತಿಗಳನ್ನೂ ನೋಡಿಕೊಂಡು ಬಂದು ಅವರ ತೀರ್ಪನ್ನು ಬರೆದಿದ್ದಾರೆ. ಇದರಿಂದ ಕರ್ಣಾಟಕಕ್ಕೆ ಅನ್ಯಾಯ ವಾಗಿಲ್ಲದೇ ಇಲ್ಲ. ಉತ್ತಮವಾದ ಹಾಗೂ ಫಲವತ್ತಾದ ಪ್ರದೇಶಗಳು ಎಂದರೆ ನಿಪ್ಪಾಣಿ ಹಾಗೂ ಖಾನಾಪುರ ಇತ್ಯಾದಿ ಕೆಲವು ಭಾಗಗಳು ಮಹಾರಾಷ್ಟ್ರದವರಿಗೆ ಹೋಗುತ್ತಿದೆ. ಇದಕ್ಕಾಗಿ ನಾವು ಬಹಳ ದುಃಖ ಪಡಬೇಕಾಗಿದೆ. ಆದರೂ ಮಹಾರಾಷ್ಟ್ರದವರೂ ಸುಮಾರು ನಾಲ್ಕೈದು ವರ್ಷಗಳಿಂದ ಭಾರಿ ಚಳುವಳಿಗಳನ್ನು ಮಾಡಿ ಇಂತಹ ಒಂದು ಕಮಿಷನ್ ಮಾಡಿದ ಮೇಲೆ ಅವರೂ ಎಲ್ಲ ಮಾಹಿತಿ ಗಳನ್ನೂ ಕೊಟ್ಟ ಮೇಲೆ ಒಳ್ಳೆಯ ವೇಧಾವಿಗಳೂ ಹಾಗೂ ನ್ಯಾಯಾಧೀಶರೂ ಆಗಿದ್ದ ಮಹಜನ್ ರವರು ತಮ್ಮ ತೀರ್ಪನ್ನು ಕೊಟ್ಟ ಮೇಲೆ ಅದನ್ನು ಸಂಪೂರ್ಣವಾಗಿ ಒಪ್ಪಲೇ ಬೇಕು. ಮಹಾರಾಷ್ಟ್ರ ದವರಿಗೆ ಬೆಳಗಾಂ ಹಾಗೂ ಕಾರವಾರ ಸಿಗಲಿಲ್ಲ ಎನ್ನುವ ಒಂದೇ ದೃಷ್ಟಿಯಿಂದ ಈ ಕಮಿಷನ್ ವರದಿ ಒಪ್ಪಕೂಡದು ಎಂದು ಈಗ ಹೇಳುವುದರಲ್ಲಿ ಅರ್ಥವಿಲ್ಲ. ಸತ್ಯ ಹಾಗೂ ಧರ್ಮದ ದೃಷ್ಟಿಯಿಂದ ಹೋಗುವುದನ್ನು ಅವರೂ ಕಲಿಯಬೇಕು. ಈಗ ಸತ್ಯವನ್ನು ಪರೀಕ್ಷೆ ಮಾಡುವ ಕಾಲ ಬಂದಿದೆ. ಇಂತಹ ಕಾಲದಲ್ಲಿ ನಮ್ಮ ದೇಶದಲ್ಲಿರುವ ಎಲ್ಲ ನಾಯಕರುಗಳೂ ನ್ಯಾಯವಾದ ದಾರಿಯಲ್ಲಿ ಹೋಗಲು ಅನುಕೂಲವಾಗುವಂತೆ ಕೇಂದ್ರದವರ ಮೇಲೆ ಸರಿಯಾದ ತಿಳುವಳಿಕೆ ಉಂಟು ಮಾಡ ಬೇಕಾದುದು ಅವಶ್ಯಕ. ಎಲ್ಲ ರಾಜಕೀಯ ನಾಯಕರುಗಳೂ ಎರಡು ರಾಜ್ಯಗಳಲ್ಲಿಯೂ ಈ ತೀರ್ಪನ್ನು ಸಂಪೂರ್ಣವಾಗಿ ಒಪ್ಪುವುದರಲ್ಲಿ ಅನುಕೂಲವಾಗುತ್ತದೆ. ಇಲ್ಲದೇ ಇದ್ದರೆ ಇಲ್ಲದ ಸಮಸ್ಯೆಗಳು ಹಾಗೂ ಗೊಂದಲಕ್ಕೆ ಕಾರಣವಾಗುತ್ತದೆ. ಆದುದರಿಂದ ಮಹಾರಾಷ್ಟ್ರದ ಮಂತ್ರಿ ಮಂಡಲದವರು ಸಂಕುಚಿತ ಭಾವನೆಯನ್ನು ಬಿಟ್ಟು ಇದಕ್ಕೆ ಅವರೂ ಒಪ್ಪುತ್ತಾರೆಂದು ನಾನು ಭಾವಿಸುತ್ತೇನೆ. ಮಹಾರಾಷ್ಟ್ರದವರು ಈಚೆಗೆ ನಡೆಸುತ್ತಿರುವ ಚಳುವಳಿ ನೋಡಿದರೆ ನನಗೆ

(ಶ್ರೀ ಬಿ. ಎಂ. ಇದಿನಬ್ಬ)

ಈ ಸಂದರ್ಭದಲ್ಲಿ ಒಂದು ಕಥೆ ನೆನಪಿಗೆ ಬರುತ್ತದೆ. ಅದು ನಮ್ಮ ಪುರಾಣಗಳಲ್ಲಿ ಬರುವ ವಿಶ್ವಾಮಿತ್ರನ ಕಥೆಯಂತೆ ಆಗಿದೆ. ಒಮ್ಮೆ ವಿಶ್ವಾಮಿತ್ರ ಋಷಿಗಳು ತಪಸ್ಸು ಮಾಡುವಾಗ ಒಬ್ಬ ಅಪ್ಸರೆಯನ್ನು ಮೋಹಿಸಿ ಅವರು ತಮ್ಮ ತಪಸ್ಸನ್ನು ಮರೆತು ಅವಳೊಂದಿಗೇ ಬಹು ಕಾಲವಿದ್ದು ಅವಳಿಂದ ಮಕ್ಕಳನ್ನೂ ಪಡೆದರು. ಅನಂತರ ಅವರಿಗೆ ಜ್ಞಾನೋದಯವಾದಾಗ ಅವರು ಈ ಮಕ್ಕಳು ತಮ್ಮದಲ್ಲ ಎಂದು ಹೇಳಿ ಒಂದು ರೀತಿಯಾದ ಕೋಪಕ್ಕೆ ಒಳಗಾದರು. ಈ ರೀತಿ ಮಹಾರಾಷ್ಟ್ರದವರು ಅವರೇ ಮೊದಲಿಗೆ ಕಮಿಷನ್ ಮಾಡಿಸಿ ಈಗ ನಾವು ಮಾಡಿದ್ದಲ್ಲ ಇದನ್ನು ಒಪ್ಪುವುದಿಲ್ಲ ಎಂದು ಹೇಳಿದರೆ ಅದರಲ್ಲೇನು ಅರ್ಥವಿದೆ? ಏನೇ ಆಗಲಿ, ಈಗ ಮಹಾಜನ್ ಕಮಿಷನ್ನಿನವರಿಂದ ಬಂದಿರತಕ್ಕ ವರದಿಯಂತೆ ಚಂದ್ರಗಿರಿಯಿಂದ ಈಚೆಗೆ ಇರುವ ಕೆಲವು ಕಾಸರಗೋಡಿನ ಭಾಗಗಳನ್ನು ಕೊಟ್ಟಿದ್ದಾರೆ. ಆದರೆ ಕಾಸರಗೋಡಿನ ಉಳಿದ ಭಾಗದಲ್ಲಿಯೂ ಕನ್ನಡ ಮಾತನಾಡತಕ್ಕ ಜನರು ಇದ್ದಾರೆ. ಅದು ಹೋದರೂ, ಚಂದ್ರಗಿರಿಯಿಂದ ಈಚೆಗೆ ನಮಗೆ ಸಿಕ್ಕಿತು ಎಂದು ಹೇಳುವ ಕಾಲದಲ್ಲಿ, ಬೆಳಗಾವಿನ ಖಾನಾಪುರ, ನಿಪ್ಪಾಣಿ, ಸೊಲ್ಲಾಪುರ, ಈ ಪ್ರದೇಶಗಳ ಅನೇಕ ಭಾಗಗಳು ನಮ್ಮ ಕೈಬಿಟ್ಟು ಹೋಗಿವೆ. ಆದರೂ ಕೂಡ ಗಡಿ ಹೊಂದಾಣಿಕೆ ವಿಚಾರ ಮುಗಿಯಬೇಕು ಎನ್ನುವ ಉದ್ದೇಶದಿಂದ ಈ ನಿರ್ಣಯ ನಮ್ಮ ಮುಂದೆ ಬಂದಿದೆ.

ಇನ್ನು ಶಿವಸೇನೆಯ ವಿಷಯವಾಗಿ ಹೇಳುವುದಾದರೆ, ದಕ್ಷಿಣ ಕನ್ನಡದ ಉಡುಪಿ ಹೋಟೆಲುಗಳು ಅನೇಕ ಬೊಂಬಾಯಿನಲ್ಲಿ ಇವೆ. ಅವರು ಅಲ್ಲಿ ಪಟ್ಟಿರತಕ್ಕ ಕಷ್ಟ ಅವರ ಬಾಯಿಂದಲೇ ನಾವು ಕೇಳುತ್ತಿದ್ದೇವೆ. ಈ ಶಿವಸೇನೆಯವರಿಂದ ಕರ್ನಾಟಕದ ಭಾಗದ ಜನರಿಗೆ ವಿಶೇಷವಾಗಿ ತೊಂದರೆ ಇದೆ. ಕಾಪು ಕ್ಷೇತ್ರದ ಸದಸ್ಯರು ಹೇಳಿದ ಹಾಗೆ ಆ ಶಿವಸೇನೆ ರಾಜಕೀಯ ಇದೆ ಎಂದು ಹೇಳುವ ಮಾತು ಸಾಧುವಾದುದಲ್ಲ. ಅದೇ ರೀತಿ ಮಾನ್ಯ ಶ್ರೀ ನಂಬೂದರಿಪಾದ್ ಅವರು ಹೇಳುತ್ತಿದ್ದಾರೆ. ಅವರು ಯಾವ ಒಪ್ಪಿಗೆಯನ್ನು ಕೊಟ್ಟಿಲ್ಲ, ಸಾಕ್ಷಿ, ಸಾಹಿತ್ಯಗಳನ್ನು ಕೊಟ್ಟಿಲ್ಲ. ಎಂದು. ಆದರೆ ಅದಕ್ಕಿಂತ ಮೊದಲು. ಆದರೆ, ಅವರು ಅಲ್ಲಿ ಮುಖ್ಯ ಮಂತ್ರಿಗಳಾಗುವುದಕ್ಕೆ ಮುಂಚೆ, ಮಂಜೇಶ್ವರ, ಮತ್ತು ಕುಂಬಳೆ ಕರ್ಣಾಟಕಕ್ಕೆ ಹೋಗುವುದು ಸರಿ ಎಂಬುದಾಗಿ ಹೇಳಿದ್ದಾರೆ. ಈವತ್ತು ಅವರು ಮುಖ್ಯ ಮಂತ್ರಿಗಳು ಆದಮೇಲೆ ಅದು ಸರಿ ಅಲ್ಲ, ಸಾಕ್ಷ್ಯವನ್ನು ಕೊಡಲಿಲ್ಲ, ಆಧಾರಗಳನ್ನು ಕೊಡಲಿಲ್ಲ, ಈಗ ನಮಗೆ ಕಾಸರಗೋಡು ಬೇಕು ಎಂದು ಅವರು ಹೇಳುವುದು ಅರ್ಥವಿಲ್ಲದಂತಾಗುತ್ತದೆ. ಕಾಸರಗೋಡು ಕೇರಳಕ್ಕೇ ಬೇಕು ಎಂದು ಕೇಳುವ ಹಕ್ಕುಳ್ಳವರು ಮಹಾಜನ್ ಅಂತಹ ನ್ಯಾಯವಾದಿಗಳ ಮುಂದೆ ಬಂದು ಏಕೆ ನಿಲ್ಲಲಿಲ್ಲ ಎಂದು ನಾನು ಕೇಳುತ್ತೇನೆ. ಅಲ್ಲಿನ ಸರ್ಕಾರದವರು ಏನು ಗಲಾಟೆ ಮಾಡಿದರೂ ಫಲವಿಲ್ಲ. ಕಾಸರಗೋಡಿನಲ್ಲಿ ಚಂದ್ರಗಿರಿ ಈಚೆಗೆ ಇರತಕ್ಕ ಭಾಗ ಕರ್ಣಾಟಕಕ್ಕೆ ಸೇರಬೇಕು ಎನ್ನುವ ವಿಚಾರದಲ್ಲಿ ಕರ್ಣಾಟಕ ಏಕೀಕರಣ ಸಮಿತಿಯ ಇಬ್ಬರು ಸದಸ್ಯರು ಮೊನ್ನೆ ನಡೆದಂತ ಚುನಾವಣೆಯಲ್ಲಿ ಆರಿಸಿ ಬಂದಿರುವ ಸಾಕ್ಷಿ ಇದೆ. ಮಹಾಜನ್ ಅವರ ವರದಿ ಬಂದಮೇಲೆ ಯಾವರೀತಿ ಕಾಸರಗೋಡಿನಲ್ಲಿ ದಬ್ಬಾಳಿಕೆ ಆಯಿತು, ಸುಧಾಕರ ಹಾಗೂ ಶಣ್ಮೈ ಬಾಲಕರನ್ನು ಹೇಗೆ ಗುಂಡುಹಾರಿಸಿ ಕೊಂದರು ಎನ್ನುವುದು ನಮಗೆ ಗೊತ್ತಿದೆ. ಇದಕ್ಕಾಗಿಯೇ ಮಂಜೇಶ್ವರದ ಗೋವಿಂದಪೈಗಳು 'ತಾಯಿ ಬಾರೆ, ಮೊಗವ ತೋರೆ, ಕನ್ನಡಿಗರ ಮಾತೆಯೇ' ಎಂಬುದಾಗಿ ಹಾಡಿದ್ದಾರೆ, ಇಡೀ ಕರ್ಣಾಟಕ ಚೆನ್ನಾಗಿ ಬೆಳೆಯಬೇಕೆಂದು ಅವರ ಬಾಯಿಯಿಂದ ಹೇಳಿದ್ದಾರೆ. ಇವತ್ತು ಈ ವರದಿ ಕಾಸರಗೋಡಿನ 2 ಲಕ್ಷಕ್ಕೆ ಮೀರಿದ ಜನತೆಗೆ ಸಂಬಂಧಿಸಿದ ಪ್ರಶ್ನೆಯಾಗಿದೆ. ಕಾಸರಗೋಡು ಸಂಪತ್ತುಳ್ಳದೇಶ. ಇದು ಅಡಿಕೆ ಬೆಳೆಗೆ ಸುಪ್ರಸಿದ್ಧವಾದುದು. ಹುಲಿಗೆ ಮನುಷ್ಯನ ರಕ್ತದ ರುಚಿ ಸಿಕ್ಕಿದರೆ ಮತ್ತೆ ಮನುಷ್ಯನನ್ನೇ ಹುಡುಕಿಕೊಂಡು ಹೋಗುವಂತೆ ಕಾಸರಗೋಡು ಅಡಿಕೆ ಸಂಪತ್ತುಳ್ಳ ದೇಶವಾದ್ದರಿಂದ ಕೇರಳದವರು ಅದನ್ನು ಬಿಟ್ಟುಕೊಡುವುದಿಲ್ಲವೆಂದು ಹೇಳುತ್ತಾರೆ. ಸುಮಾರು 11 ವರ್ಷಗಳಲ್ಲಿ ಕಾಸರಗೋಡಿನಲ್ಲಿ ಮರೆಯಾಳಿಗಳೇ ತುಂಬಿದ್ದಾರೆ. ಈ ರೀತಿ ಅಲ್ಲಿ ಒಂದು ಶಕ್ತಿ ಬಲ ಬಾದಿದೆ. ಆದರೂ ಕಾಸರಗೋಡನ್ನು ಅವರೇ ಹಿಡಿದುಕೊಳ್ಳಬೇಕೆಂಬ ಭಾವನೆ ಕೇರಳ ಸರ್ಕಾರಕ್ಕೆ ಇದ್ದರೂ, ಅದು ಹಗಲು ಕನಸಾಗುತ್ತದೆ. ಮಹಾಜನ್ ಅವರು ಕರ್ಣಾಟಕಕ್ಕೆ ಕೊಟ್ಟಿರುವುದು ಕಾಸರಗೋಡಿನ ಒಂದು ಭಾಗ. ಕಾಸರಗೋಡಿನ ಮಂಜೇಶ್ವರದಿಂದ ನಮ್ಮಲ್ಲಿಗೆ ಕೇವಲ ಮೂರು ಮೈಲಿಗಳಿವೆ. ಕಾಸರಗೋಡು ನಮಗೆ ಬಂದರೆ ಕೇರಳಾದವರಿಗೆ ಹೆಚ್ಚಿನ ಸೌಕರ್ಯವುಂಟು. ನಮ್ಮ ಕಡೆ ಶಿವಮೊಗ್ಗಾದಿಂದ ಚಿತ್ರದುರ್ಗದಿಂದ ಅಕ್ಕಿ ಕಳ್ಳಸಾಗಾಣಿಕೆಯಲ್ಲಿ ಅಲ್ಲಿಗೆ ಹೋಗುತ್ತದೆ. ಕಾಸರಗೋಡಿನಲ್ಲಿ ಅಷ್ಟಾಗಿ ಅಕ್ಕಿ ಸಿಗುವುದಿಲ್ಲ. ತಿರುವನಂತಪುರಕ್ಕೆ ರೈಲಿನಲ್ಲಿ ಹೋಗುತ್ತದೆ. ಅಲ್ಲಿಂದ ಮುಂಬೈಗೂ ಕೂಡ ಹೆಚ್ಚು ಪಾಲು ರವಾನೆ ಆಗುತ್ತದೆ. ಕಾಸರಗೋಡು ಇಡೀ ತಾಲ್ಲೂಕು ಬಂದರೆ ಕಳ್ಳಸಾಗಣಿಕೆ ತಪ್ಪುತ್ತದೆ. ಅಕ್ಕಿ ಬೆಲೆ ಕಾಸರಗೋಡಿನಲ್ಲಿ ಭದ್ರವಾಗುವ

ಪರಿಸ್ಥಿತಿ ಇದರಿಂದ ಬರುತ್ತದೆ. ಈಗ ಮಹಾಜನರವರ ವರದಿಯನ್ನು ಒಪ್ಪುವುದಾದರೆ ನಮಗೆ ಕಾಸರಗೋಡು ಸಿಗುತ್ತದೆ. ಅದೇ ರೀತಿ ಕೆಲವು ಭಾಗಗಳೂ ಮಹಾರಾಷ್ಟ್ರಕ್ಕೆ ಹೋದರೆ ಕನ್ನಡ ನಾಡಿಗೆ ಬರುವ ಪ್ರಯೋಜನವೂ ಕಡಿಮೆಯಾಗುತ್ತದೆ. ಈ ಬಗ್ಗೆ ಕೇಂದ್ರದ ಪಾರ್ಲಿಮೆಂಟ್‌ನಲ್ಲಿ ಒಂದು ಕಾಯಿದೆ ಆಗಬೇಕು. ಏಕೆಂದರೆ ಗೃಹಮಂತ್ರಿಗಳು ಈಗ ಇಡೀ ರಾಷ್ಟ್ರದ ಒಟ್ಟು ಅಭಿಪ್ರಾಯವನ್ನು ಕೇಳಬೇಕೆಂದು ಹೇಳುತ್ತಿದ್ದಾರೆ. ಅದರಲ್ಲಿ ಅರ್ಥವಿಲ್ಲ. ಕೇರಳದ ಶ್ರೀ ಪಣಿಕ್ಕರ್ ಅವರು ಫಜಲಾಲಿ ಸಮಿತಿಯಲ್ಲಿದ್ದಾಗ ಏನಾಯಿತು ಎಂಬುದನ್ನು ಈ ಸಂದರ್ಭದಲ್ಲಿ ತಿಳಿಯಬೇಕು. ಮಹಾರಾಷ್ಟ್ರದ ಚವಾಣ್ ಅವರು ಈಗ ಕೇಂದ್ರದಲ್ಲಿ ಮಂತ್ರಿಗಳಾಗಿರುವುದರಿಂದ ನಮಗೆ ಈ ಗಡಿ ಹೊಂದಾಣಿಕೆಯಲ್ಲಿ ಹೆಚ್ಚಿನ ನ್ಯಾಯ ಬರುವುದಕ್ಕೆ ಸಾಧ್ಯವಿಲ್ಲವೆಂಬ ಭಾವನೆ ಇದೆ. ಈ ವರದಿಯನ್ನು ಒಪ್ಪುವುದಕ್ಕಾಗುವುದಿಲ್ಲವೆಂದು ಕೇಂದ್ರದ ಮಂತ್ರಿಗಳಾದ ಶುಕ್ಲಾರವರು ಹೇಳಿದ್ದಾರೆ. ನಮ್ಮ ಮುಖ್ಯಮಂತ್ರಿಗಳು ಏಕಸದಸ್ಯ ಆಯೋಗಕ್ಕೆ ಒಪ್ಪಿಗೆ ಕೊಟ್ಟಮೇಲೆ ಮಹಜನಾಸಾಧನೆಯಾದುದು ಏನೆಂದರೆ, ಇಡೀ ಕಾಸರಗೋಡು ಬರದೆ ಇದ್ದರೂ ಬೆಳಗಾಂ ಉಳಿಯಿತು, ಕಾರವಾರ ಉಳಿಯಿತು, ಹೆಚ್ಚಿನ ಮಟ್ಟಿಗೆ ನ್ಯಾಯ ನಮಗೆ ದೊರಕಿದೆ. ಅನೇಕ ಪ್ರದೇಶ ಕೂಡ ಹೋಗಿದೆ. ಅಂತಹ ಸಂದರ್ಭದಲ್ಲಿ ಇನತಹ ಪಾರ್ಲಿಮೆಂಟಿನಲ್ಲಿ ಗೃಹಸಚಿವರು ಹಾಗೂ ಸ್ಟೇಟ್ ಮಂತ್ರಿಗಳು ಹೇಳಿದ್ದು ಸರಿಯಲ್ಲ. ಕೇಂದ್ರ ಸರ್ಕಾರದಲ್ಲಿ ನಮ್ಮ ರಾಜ್ಯದ ಪಾರ್ಲಿಮೆಂಟಿನ ಸದಸ್ಯರು ಹಾಗೂ 4 ಜನ ಮಂತ್ರಿಗಳೂ ಇದ್ದಾರೆ, ಅವರಲ್ಲಿ ಕ್ಯಾಬಿನೆಟ್ ಮಂತ್ರಿಗಳು ಇಬ್ಬರು, ಸ್ಟೇಟ್ ಮಂತ್ರಿಗಳು ಇಬ್ಬರು ಇದ್ದಾರೆ. ಅವರೆಲ್ಲರೂ ತಂತಮ್ಮ ಶಕ್ತಿಯನ್ನು ಉಪಯೋಗಿಸಿ ಬೇಕಾದಷ್ಟು ವಿಚಾರಗಳನ್ನು ಹೇಳಬೇಕು. ಒಂದುವೇಳೆ ಈ ವಿಚಾರದಲ್ಲಿ ಗೃಹಮಂತ್ರಿಗಳೂ ತಮ್ಮಂತೆ ಮುಂದುವರಿಸಿದರೆ, ನಾವೆಲ್ಲರೂ ಖಂಡಿತವಾಗಿ ರಾಜೀನಾಮೆ ಕೊಡುತ್ತೇವೆಂದು ಬೆದರಿಕೆ ಹಾಕುತ್ತಿದ್ದೇವೆ. ಕನ್ನಡನಾಡಿನ ಜನ ಸತ್ಯ, ನ್ಯಾಯ, ಅಹಿಂಸಾವಾದಿಗಳು. ಕೆರಳಿದರೆ ಸಿಂಹಗಳಾಗಿ ಮೆರೆಯುವಂತಹವರು ಕನ್ನಡಿಗರು. ಒಂದುವೇಳೆ ಮಹಾರಾಷ್ಟ್ರದವರು ಮುಂಬೈ ಪರ ವಾದವಮಾಡಿ ಹಿಂಸೆ ಮಾಡುವವರಾದರೆ, ಕನ್ನಡಿಗರು ಅದೇ ರೀತಿಯಲ್ಲಿ ಹೋರಾಡಿದರೆ ಅದರ ಪರಿಣಾಮ ಮುಂದೆ ಏನಾದೀತೆಂಬುದನ್ನು ನೋಡಬೇಕಾಗುತ್ತದೆ. ಅಖಿಲ ಭಾರತ ಕಾಂಗ್ರೆಸ್ ಅಧ್ಯಕ್ಷರಾಗಿ ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಈಗ ಹೋಗುತ್ತಿದ್ದಾರೆ. ಈ ಪ್ರಶ್ನೆ ಬಹಳ ಒಳ್ಳೆಯ ರೀತಿಯಲ್ಲಿ ಬಗೆಹರಿಯುತ್ತದೆಂದು ನಮಗೆ ನಂಬಿಕೆ ಇದೆ. ಅವರು ಎಷ್ಟೇ ಗಲಾಟೆ ಮಾಡಿದರೂ, ಗೃಹಮಂತ್ರಿಗಳೂ ಮತ್ತು ಸ್ಟೇಟ್ ಮಂತ್ರಿಗಳು ಏನೇ ಹೇಳಿದರೂ ಇದರ ಬಗ್ಗೆ ಕಾಯಿದೆಯಾಗುವ ಕಾಲವಲ್ಲ ಮಹಾಜನ್ ಅವರ ವರದಿಯನ್ನು ಸಂಪೂರ್ಣವಾಗಿ ಒಪ್ಪತಕ್ಕ ಪರಿಸ್ಥಿತಿ ಬರಬಹುದೆನ್ನುವ ಭಾವನೆ ಇದೆ. ಅವರು ಒಂದುವೇಳೆ ಮಹಾಜನ್ ಅವರ ವರದಿಯನ್ನು ಒಪ್ಪದೇ ಹೋದರೆ ಪ್ರಜಾಪ್ರಭುತ್ವಕ್ಕೇ ಕಳಂಕ ಬರುತ್ತದೆ. ಈ ಪ್ರಜಾಪ್ರಭುತ್ವದಲ್ಲಿ ಒಬ್ಬ ಶ್ರೇಷ್ಠನ್ಯಾಯಾಧೀಶರೊಬ್ಬರ ಆಯೋಗವನ್ನು ರಚನೆಮಾಡಿ ಅವರು ಒಂದು ವರದಿಯನ್ನು ಕೊಟ್ಟಮೇಲೆ ಅದನ್ನು ಒಪ್ಪುವುದಿಲ್ಲವೆಂದು ಹೇಳಿದರೆ ಅದಕ್ಕಿಂತಲೂ ಪ್ರಜಾಪ್ರಭುತ್ವಕ್ಕೆ ಭಂಗ ಬೇರೆ ಇರಲಿಕ್ಕಿಲ್ಲವೆಂದು ನಾನು ಹೇಳುತ್ತೇನೆ. ಆದ್ದರಿಂದ ನಾನು ಹೇಳುವುದಿಷ್ಟೇ. ಮಹಾಜನ್ ಅವರ ಸಮಿತಿಯ ವರದಿ ಇಲ್ಲಿ ಕಾಯಿದೆಯಾಗಬೇಕೆಂಬ ಭಾವನೆ ಇದೆ. ಈ ನಮ್ಮ ಸದನದಲ್ಲಿ ಎದುರುಪಕ್ಷದ ಸದಸ್ಯರುಗಳಿಗೆ ಎಷ್ಟೇ ವ್ಯತ್ಯಾಸವಿದ್ದರೂ ಕೂಡ ಗಡಿ ಸಮಸ್ಯೆ ಒಮ್ಮೆಯೇ ನಿಂತುಹೋಗಲಿ ಎಂದು, ಈ ವಿಚಾರವಾಗಿ ಎಲ್ಲರೂ ಒಮ್ಮನಸ್ಸಿನಿಂದ ಒಪ್ಪಿಗೆ ಕೊಟ್ಟು ನಮ್ಮ ಆಕಾಂಕ್ಷೆಯನ್ನು ತೋರಿಸಬೇಕು. ಪಾರ್ಲಿಮೆಂಟಿನಲ್ಲಿ ಕಾಯಿದೆಯಾಗಬೇಕು ಎಂಬುದಾಗಿ ಕೇಳುವಂಥಾದ್ದು ನಮ್ಮ ಕರ್ತವ್ಯ.

ಇಂತಹ ವಿಚಾರವಾಗಿ ನನಗೆ ಇಲ್ಲಿ ನಾಲ್ಕು ಮಾತುಗಳನ್ನು ಆಡುವುದಕ್ಕೆ ಸಮಯವನ್ನು ಕಲ್ಪಿಸಿಕೊಟ್ಟಿದ್ದಕ್ಕಾಗಿ ನಾನು ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Mr. DEPUTY SPEAKER.—The House will now rise and meet tomorrow a8-30 A.M.

The House adjourned at Seven of the Clock to meet again at Thirty Minutes past Eight of the Clock on Tuesday, the 19th December 1967.

WD 9743—GPB—600—1-2-1968

L.A.